ಹೊಸ ಮನುಷ್ಯ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೬ ಮೇ-೨೦೦೬ ಸಂಚಿಕೆ-೧೦



ಎಪ್ಪತ್ತಾರು ವರ್ಷಗಳ ನಂತರ ಪುನಶ್ಚೇತನಗೊಂಡ ಸತ್ಯಾಗ್ರಹ

೧.) ಎಪ್ಪತ್ತಾರು ವರ್ಷಗಳ ನಂತರ ಪುನಶ್ಚೇತನಗೊಂಡ ಸತ್ಯಾಗ್ರಹ

– ಸುರೇಂದ್ರ ಕೌಲಗಿ

ನರ್ಮದಾ ಅಣೆಕಟ್ಟೆಯ ಜ್ವಲಂತ ಸಮಸ್ಯೆಗಳ ಬಗ್ಗೆ ಲೋಕದ ಗಮನವನ್ನು ಸೆಳೆದ ಮೇಧಾ ಪಾಟ್ಕರ್‌ರವರ ಇತ್ತೀಚೆಗಿನ ಸೋಲಲನ್ನರಿಯದ ಸತ್ಯಾಗ್ರಹ ಕುರಿತು ಕೆಲವು ಪೂರಕ ಮಾತುಗಳು ಈ ಲೇಖನದಲ್ಲಿ ಬಿಂಬಿತವಾಗಿವೆ.

೨.) ನಿಸರ್ಗೋಪಚಾರ ತಜ್ಞ ವಿಠಲದಾಸ್ ಮೋದಿಯವರ ಪರಿಚಯ

– ಡಾ॥ ಜಿ.ವಿ.ಕುಲಕರ್ಣಿ

ಪಾಶ್ಚಿಮಾತ್ಯ ಚಿಕಿತ್ಸಾ ವಿಧಾನ ವಿಫಲವಾದ ಕಡೆಯಲೆಲ್ಲಾ ಭಾರತೀಯ ಚಿಕಿತ್ಸಾ ಪದ್ಧತಿಗಳಾದ ಆಯುರ್ವೇದ ಮತ್ತು ನಿಸರ್ಗೋಪಚಾರ ಯಶಸ್ವಿಗೊಳ್ಳುತ್ತಿವೆ. ಅದ್ಭುತ ಅಂತಸತ್ವದ ನಿಸರ್ಗೋಪಚಾರದ ಪ್ರವರ್ತಕರಲ್ಲಿ ಒಬ್ಬರಾಗಿರುವ ವಿಠಲದಾಸ್ ಮೋದಿಯವರನ್ನು ಈ ಲೇಖನದಲ್ಲಿ ಪರಿಚಯಿಸಲಾಗಿದೆ.

೩.) ಜೀವನ ಕುತೂಹಲ

– ಜಿ.ಟಿ.ನಾರಾಯಣರಾವ್

ಮನುಷ್ಯ ಈ ಭೂಮಿಯ ಮೇಲೆ ಕಾಣಿಸಿಕೊಂಡಾಗಿನಿಂದ ತನ್ನ ಸುತ್ತಲಿನ ಪ್ರಕೃತಿಯ ಬಗ್ಗೆ, ಘಟನೆಗಳ ಬಗ್ಗೆ, ಮನೋವ್ಯಾಪಾರದ ಬಗ್ಗೆ, ಕುತೂಹಲವನ್ನು ಉಳಿಸಿಕೊಂಡು ಬಂದಿದ್ದಾನೆ. ಈ ಕುತೂಹಲವೆ ಅವನ ಜೀವನದ ಎಲ್ಲ ರೂಪುರೇಷೆಗಳಿಗೆ ಕಾರಣವಾಗಿದೆ ಎಂಬುದನ್ನು ಲೇಖಕರು ತಮ್ಮ ಈ ಲೇಖನದಲ್ಲಿ ಓದುಗರ ಕುತೂಹಲ ಉಳಿದುಕೊಂಡು ಬರುವಂತೆ ಬಣ್ಣಿಸಿದ್ದಾರೆ.

೪.) ಜಾಗತೀಕರಣದ ಅಲೆ ಹಾಗೂ ಭಾರತೀಯ ಭಾಷೆಗಳು

– ಡಾ॥ ಅರ್ಜುನಪುರಿ ಅಪ್ಪಾಜಿಗೌಡ

ಜಾಗತೀಕರಣ ವ್ಯಷ್ಟಿ ಮತ್ತು ಸಮಷ್ಟಿಗಳ ಮೇಲೆ ಏಕಕಾಲಕ್ಕೆ ದಾಳಿ ಮಾಡುತ್ತಿದೆ. ಅದರಿಂದಾಗಿ ಪುಷ್ಟಿದಾಯಕವಾದ ಸಂಸ್ಕೃತಿ ನಾಮಾವಶೇಷವಾಗುತ್ತದೆಂಬ ಚಿಂತೆಯನ್ನು ಲೇಖಕರು ಈ ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ.

೫.) ಸಮಾನ ಶಾಲಾ ಶಿಕ್ಷಣ ವ್ಯವಸ್ಥೆ ಇನ್ನೂ ಬಹುದೂರ

– ಶಾರದಾ ಗೋಪಾಲ

ಸಮಾನತೆಯ ಕಲ್ಪನೆಯನ್ನು ಮಕ್ಕಳ ಮನಸ್ಸಿನಲ್ಲಿ ಮೂಡಿಸಬೇಕಾದ ಶಿಕ್ಷಣವೆ ಅಸಮಾನತೆಯ ಭಾವನೆಯನ್ನು ಬಿತ್ತುತ್ತಾ ನಡೆದರೆ ಗತಿಯೇನು? ಕಳೆದ ಫೆಬ್ರವರಿ ೨೮ರಂದು ಲೋಕಸಭೆಯಲ್ಲಿ ಶಿಕ್ಷಣ ಮಸೂದೆ ಮಂಡಿತವಾಗಿರುವಾಗ ಶಿಕ್ಷಣ ಪ್ರೇಮಿಗಳು ಯೋಚಿಸಬೇಕಾದುದು ಬಹಳಷ್ಟಿದೆ ಎಂಬುದು ಈ ಲೇಖನದ ಲೇಖಕಿಯರ ಅಭಿಪ್ರಾಯವಾಗಿದೆ.

೬.) ಮೌನದಿಂದ ಯುವ ಮನಸ್ಸನ್ನು ಪರಿವರ್ತಿಸಿದ ಗಾಂಧೀ

– ಸೋಮೇಶ್ ಪುರೋಹಿತ್

ಸತ್ಯಾಗ್ರಹಿಯ ಕ್ರಿಯೆಯಲ್ಲಿ ಶಕ್ತಿಯಿರುವಂತೆಯೆ ಅವನ ಮೌನದಲ್ಲಿಯೂ ದ್ವಿಗುಣ ಶಕ್ತಿಯಿದೆ ಎಂಬುದನ್ನು ನೈಜ ಘಟನೆಯೊಂದನ್ನಾಧರಿಸಿ ಲೇಖಕರು ತಮ್ಮ ಈ ಲೇಖನದಲ್ಲಿ ಸಿದ್ಧಪಡಿಸಿದ್ದಾರೆ.

ಜನಪದ ವಿಚಾರ
ತಿಂಗಳ ವೈಚಾರಿಕ ಡೈಜೆಸ್ಟ್

ಮೇ-೨೦೦೬
ಸಂಪುಟ-೬
ಸಂಚಿಕೆ-೧೦

ಸಂಪಾದಕ
ಸುರೇಂದ್ರ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧ ೪೩೧
ಮಂಡ್ಯ ಜಿಲ್ಲೆ

(08236)298754
e-mail-janapada@yahoo.com
www.janapada.org

ಎರಡು ರತ್ನಗಳು

ಪರಕೀಯ ಪಾರತಂತ್ರ್ಯದ ಆ ಬಲೆಯನು
ಕಿತ್ತೊಗೆದು- "ಸ್ವಾತಂತ್ರ್ಯಶಿಲ್ಪಿ"
ಎನಿಸಿದವರು ಗಾಂಧೀ,
ಸಾಮಾಜಿಕ ಉಪದ್ರವದಿ ನೊಂದವರ ಎದೆಗೆ
ತಂಪನೆರೆದ ಈ "ಸಂವಿಧಾನ ಶಿಲ್ಪಿ"
ಎನಿಸಿದವರು ಬಾಬಾ;
ಅಸ್ಪೃಶ್ಯತೆಯನು ಅರಿತು ಅದನು
ಆತ್ಮೀಕರಿಸಿಕೊಂಡು
'ಹರಿಜನ ಸೇವಕರಾಗಿ' ಬೆರೆತವರು ಆ ಬಾಪು,
ಅಸ್ಪೃಶ್ಯರ ಅಸಹ್ಯವನು ಆಜನ್ಮದಿ ಉಂಡು
'ಮೂಕನಾಯಕರಾಗಿ' ಕೊರಗಿದವರು ಈ ಬಾಬಾ;
'ಸಮಾಜ ಸಾಗರದ ಅ(ನಿ)ಷ್ಟಪಾದಿ ಆಗಿಹುದೀ
ಅಸ್ಪೃಶ್ಯತೆ ಎಂದ ವಾಸ್ತವವಾದಿ-ಆ ಗಾಂಧೀಜಿ,
'ಅಸ್ಪೃಶ್ಯತೆಯ ಮೂಲವೆಂತಿರಲಿ
ಆಗಬೇಕಾದುದು ಇದರ
ಮೂಲೋತ್ಪಾಟನೆ' ಎಂದ ವಿಚಾರವಾದಿ
ಈ ಭೀಮ್‌ಜಿ;
'ಮೂಲೋತ್ಪಟನೆಗೆ ಪರಿವರ್ತನೆಯೇ-
ಪರಮು, ಚರಮು ಪರಿಹಾರ'ವೆಂದು ಸಾರಿದ
ಮಂದಗಾಮಿ- ಆ ಮಾನವರತ್ನ
'ಮಡಿವಂತರ ಮೈಲಿಗೆಯನು ತೊಳೆದು ತೊಲಗಿಸೆ
ಕಾನೂನಿನಸ್ತ್ರವೇ ಸರಿ' ಎಂದ ಶೀಘ್ರಗಾಮಿ
ಈ ಭಾರತರತ್ನ;
ಹೆಣಗಿದ ಅವರೂ ಇವರೂ ಇಲ್ಲವಾದ ಮೇಲೆ
ಕಾನೂನಿನ ಕೋಲ್ಬಲದಿ, ಸಾಮಾನ್ಯೀಕರಣದ
ಬಹಿರಂಗದಾಟದಲಿ ಅಸ್ಪೃಶ್ಯತೆ ತಾನು ಅಳಿದಿದೆ;
ಆದರೆ ಬಾಳಿ-ಬಾಳಿಸುವ
ಸಮಾಜೀಕರಣವಾಗಿಲ್ಲವಾಗಿ
ಅಂತರಂಗದಾಳದಲ್ಲಿ ಅಸ್ಪೃಶ್ಯತೆ ತಾನು ಉಳಿದಿದೆ
ಉಭಯತ್ರರಿಗೂ ಸವಾಲಾಗಿ
ಉಳಿದು ಉಸಿರಾಡುತಿದೆ!

-ಎಲ್ಲೆನ್ ತೊಂಡೋಟಿ

ವಿಚಾರ ದೀಪ್ತಿ

ಎರಡು ಬೀಜಗಳು ಹೇಗೋ ಎಂತೋ ಸತ್ತ್ವಪೂರ್ಣ ಮಣ್ಣಿನಡಿ ಸೇರಿದವು. ಸ್ವಲ್ಪ ಸಮಯ ಕತ್ತಲಿನಲ್ಲಿ ಕಳೆದ ಅನಂತರ ಒಂದು ಬೀಜಕ್ಕೆ ಮೊಳೆಯುವ, ಬೆಳೆಯುವ ಇಚ್ಛೆಯುಂಟಾಯಿತು.

ಮೊಳಕೆಯೊಡೆಯಲು ಬಯಸಿದ ಬೀಜ ತನ್ನ ಸಂಗಾತಿಯನ್ನು ಕುರಿತು ಹೇಳಿತು, "ನನಗೆ ಬೆಳೆಯುವ ಆಸೆಯಾಗುತ್ತಿದೆ, ಬೇರುಗಳನ್ನು ನೆಲದಾಳಕ್ಕಿಳಿಸಿ, ಚಿಗುರುಗಳನ್ನು ಮಣ್ಣಿನಿಂದ ಮೇಲಕ್ಕೇರಿಸಿ, ಮೊಳಕೆಯೊಡೆಯಲು ನಾನು ಕಾತರಿಸುತ್ತಿದ್ದೇನೆ."

ಎರಡನೆಯ ಬೀಜ ಹೆದರಿ ಮತ್ತಷ್ಟು ತಳ ಸೇರುವ ಪ್ರಯತ್ನ ಮಾಡುತ್ತಾ "ಬೇಡ ಗೆಳೆಯ, ಚಿಗುರುವಿಕೆ ಎಂದರೆ ನಮ್ಮ ಸಾವು. ಬೇರುಗಳು, ಚಿಗುರುಗಳು ಹುಟ್ಟುತ್ತಿರುವಂತೆ ನಾವು ಸಾಯುತ್ತೇವೆ. ಹಾಗಾಗಿ ಬೇಡ ನಿನ್ನ ಆ ಯೋಚನೆ" ಎಂದಿತು.

ಮೊದಲ ಬೀಜ ಇಚ್ಛಿಸಿದಂತೆ ಚಿಗುರಿತು. ನೆಲದಾಳಕ್ಕೆ ಇಳಿದು ಅಲ್ಲಿಯ ಸತ್ವವನ್ನು ಹೀರಿಕೊಂಡು ಹೆಮ್ಮರವಾಯಿತು. ಹೂ-ಹಣ್ಣುಗಳಿಂದ ನಳನಳಿಸಿತು. ಮರದ ಮೇಲೆ ಹಕ್ಕಿಗಳು ಗೂಡು ಕಟ್ಟಿದವು. ಮಕ್ಕಳು ಜೋಕಾಲಿಯಾಡಿದರು. ಅದರ ನೆರಳಿನಲ್ಲಿ ಮಂದಿ ವಿಶ್ರಮಿಸಿದರು. ಹಣ್ಣು ತಿಂದು ತೃಪ್ತರಾದರು. ಬೀಜದ ಬದುಕು ಸಾರ್ಥಕವಾಯಿತು.


ಇನ್ನು ಎರಡನೆಯ ಬೀಜದ ಗತಿಯೇನಾಯಿತೋ ನೋಡೋಣ. ಹೇಂಟೆಯೊಂದು ಆಹಾರ ಹುಡುಕುತ್ತಾ ಇರುವಾಗ, ಮಣ್ಣಿನಡಿಯಲ್ಲಿ ಅವಿತಿದ್ದ ಬೀಜವನ್ನು ಕಂಡಿತು. ಕೊಕ್ಕಿನಿಂದ ಹೆಕ್ಕಿ ಅದನ್ನು ಹೊಟ್ಟೆಗಿಳಿಸಿತು. ಬೀಜ, ಪಾಪ ಹೇಂಟೆಯ ಹೊಟ್ಟೆಯಲ್ಲಿ ಜೀರ್ಣವಾಗಿ ಹೋಯಿತು. ಎರಡೂ ಬೀಜಗಳ ಅಂತಿಮ ಗತಿ ಒಂದೇ, ಸಾವು. ಒಂದು ವಿಕಸನದಲ್ಲಿ ಸಾರ್ಥಕ ಸಾವು ಕಂಡರೆ, ಇನ್ನೊಂದು ಅವಿಕಸಿತವಾಗಿ ನಿಸ್ಸಾರ ಸಾವು ಕಂಡಿತು.

-ಸಂಧ್ಯಾ ಎಸ್.ಪೈ

ಎಪ್ಪತ್ತಾರು ವರ್ಷಗಳ ನಂತರ ಪುನಶ್ಚೇತನಗೊಂಡ ಸತ್ಯಾಗ್ರಹ

– ಸುರೇಂದ್ರ ಕೌಲಗಿ

"ಸತ್ಯಾಗ್ರಹ ಸ್ವಾವಲಂಬಿತ. ಅದು ಕಾರ್ಯರೂಪಕ್ಕೆ ಬರಲು ವಿರೋಧಿಯ ಒಪ್ಪಿಗೆ ಬೇಕಿಲ್ಲ. ವಿರೋಧಿ ಅದನ್ನು ಪ್ರತಿಭಟಿಸಿದಾಗಲೆ ನಿಜವಾಗಿಯೂ ಅದು ಪ್ರಕಟಿತ. ಆದ್ದರಿಂದಲೇ ಅದು ಅಪ್ರತಿಹತ. ಸತ್ಯಾಗ್ರಹಿ ಸೋಲೆಂಬುದನ್ನೇ ಅರಿಯ. ಏಕೆಂದರೆ ಸತ್ಯಾಗ್ರಹಕ್ಕಾಗಿ ಅವನ ಹೋರಾಟ ಅವಿಶ್ರಾಂತ. ಆ ಹೋರಾಟದಲ್ಲಿ ಸಾವು ಮುಕ್ತಿ; ಜೈಲುವಾಸ ಸ್ವಾತಂತ್ರ್ಯದ ಹೆಬ್ಬಾಗಿಲು." –ಗಾಂಧೀ



ಗಾಂಧೀಯವರೊಂದಿಗೆ ಪ್ರಾರಂಭಗೊಂಡು ಅವರೊಂದಿಗೇ ಕಣ್ಮರೆಯಾಗಿದ್ದ ಸತ್ಯಾಗ್ರಹವೆಂಬ ಅಹಿಂಸಾತ್ಮಕ ಮತ್ತು ಪ್ರಜಾಸತ್ತಾತ್ಮಕ ಹೋರಾಟದ ವಿಧಾನವೊಂದು ಸಮಾಜದ ಕಟ್ಟಕಡೆಯ ಮನುಷ್ಯನ ಹಿತಕ್ಕಾಗಿ ಮತ್ತು ಸ್ವತಂತ್ರ ಭಾರತದ ಗಾಂಧೀಯುಗೋತ್ತರದಲ್ಲಿ "ಪ್ರಕೃತಿ ಎಲ್ಲರ ಅವಶ್ಯಕತೆಯನ್ನು ಪೂರೈಸಬಲ್ಲದು, ಆದರೆ ಯಾವುದೇ ಒಬ್ಬ ವ್ಯಕ್ತಿಯ ದುರಾಸೆಯನ್ನು ಪೂರೈಸಲಾರದು" ಎಂಬ ಗಾಂಧೀಯ ಮಾತಿಗೆ ಚ್ಯುತಿವುಂಟಾಗುತ್ತಿರುವ ಸಮಯದಲ್ಲಿ ಮೇಧಾ ಪಾಟ್ಕರ್ ತಮ್ಮ ೬೦ನೆಯ ವಯಸ್ಸಿನ ಸುಮಾರಿನಲ್ಲಿ ಮಾರ್ಚ್ ೨೯ರಿಂದ ಏಪ್ರಿಲ್ ೧೪ರ ವರೆಗೆ ೧೫ ದಿನಗಳ ಸತ್ಯಾಗ್ರಹ ಕೈಗೊಂಡು ಗಾಂಧೀಯವರ ಸತ್ಯಾಗ್ರಹವನ್ನು ಪುನಶ್ಚೇತನಗೊಳಿಸಿದ್ದಾರೆ. ಗಾಂಧೀಯವರು ಭಾರತದಲ್ಲಿ ಮೊಟ್ಟ ಮೊದಲಬಾರಿಗೆ ೧೯೧೭ರಲ್ಲಿ ಬಿಹಾರಿನ ಚಂಪಾರಣ್ಯದಲ್ಲಿ ನೀಲಿತೋಟಗಳ ಬ್ರಿಟಿಷ್ ಮಾಲೀಕರ ವಿರುದ್ಧ ಹೂಡಿದ್ದ ಸತ್ಯಾಗ್ರಹದ ವಿಧಾನ ಇನ್ನು ಇಲ್ಲವಾದಂತಾಯಿತಲ್ಲ ಎಂಬ ಭಾವನೆ ಭಾರತೀಯರ ಮನೋಜಗತ್ತಿನಲ್ಲಿ ಸ್ಥಿರಗೊಳ್ಳುವ ಮುನ್ನವೇ ನರ್ಮದಾ ಅಣೆಕಟ್ಟಿನ ಎತ್ತರವನ್ನು ಸರ್ವೋಚ್ಚ ನ್ಯಾಯಲಯದ ಆದೇಶಕ್ಕೆ ವಿರುದ್ಧವಾಗಿ

ಹೆಚ್ಚಿಸಬೇಕೆಂಬ ಕೇಂದ್ರ ಸರ್ಕಾರದ ನಿರ್ಣಯವನ್ನು ಗಾಂಧೀ ಪ್ರಣೀತ ಸತ್ಯಾಗ್ರಹದ ಮೂಲಕ ವಿರೋಧಿಸಿ ಸರ್ಕಾರವು ತನ್ನ ಮೊದಲಿನ ಆಪತ್ಕಾರಿ ನಿರ್ಣಯವನ್ನು ಪುನರ್ ಪರಿಶೀಲಿಸುವಂತೆ ಮಾಡಲು ಮೇಧಾ ಪಾಟ್ಕರ್ ಯಶಸ್ವಿಯಾಗಿದ್ದಾರೆ.

ಮೇಧಾರವರ ೨೦೦೬ ನೇ ಇಸವಿಯ ಸತ್ಯಾಗ್ರಹವನ್ನು ೮೯ ವರ್ಷಗಳ ಹಿಂದೆ ಗಾಂಧಿಯವರು ಚಂಪಾರಣ್ಯದಲ್ಲಿ ಇಂಗ್ಲಿಷ್ ಭೂಮಾಲೀಕರ ಕಪಿಮುಷ್ಟಿಯಿಂದ ನೀಲಿ ಬೆಳೆಗಾರರನ್ನು ರಕ್ಷಿಸಲು ಮಾಡಿದ್ದ ಸತ್ಯಾಗ್ರಹಕ್ಕೆ ಹೋಲಿಸಬಹುದು. ಆ ಸತ್ಯಾಗ್ರಹದಲ್ಲಿ ಗಾಂಧೀಯವರು ನಿರ್ಗತಿಕರ ಧ್ವನಿಯಾಗಿದ್ದರು, ಬಲರಾಮನಾಗಿದ್ದರು. ಸಾವಿರಾರು ನೀಲಿಬೆಳೆಯುವ ರೈತರ ವಿಮೋಚನೆಗಾಗಿ ಮತ್ತು ಅವರ ಜೀವನದ ನೆಮ್ಮದಿಗಾಗಿ ಹೋರಾಟನಡೆಸಿದ್ದರು. ಅದೇ ರೀತಿಯಲ್ಲಿ ಮೇಧಾರವರು ಈಗ ಸುಮಾರು ೨೩,೦೦೦ ರೈತರ ಅಳಲನ್ನು ನೀಗಿಸುವುದಕ್ಕಾಗಿ ಸತ್ಯಾಗ್ರಹ ಹೂಡಿದರು. ನಮ್ಮದೆ ಸರ್ಕಾರಗಳು ಅಭಿವೃದ್ಧಿಯ ಹೆಸರಿನಲ್ಲಿ ಶ್ರೀಮಂತರ ಹಿತವನ್ನು ಬಯಸುತ್ತಾ ಮೂಲನಿವಾಸಿಗಳ ಬಾಳನ್ನು ಹಾಳುಮಾಡುತ್ತಾ ನಿರ್ಮಾಣಮಾಡುತ್ತಿರುವ ನರ್ಮದಾ ಅಣೆಕಟ್ಟಿನ ಎತ್ತರದ ವಿರುದ್ಧ ಕಳೆದ ಇಪ್ಪತ್ತು ವರ್ಷಗಳಿಂದ ಹೋರಾಡುತ್ತಿದ್ದಾರೆ. ಶ್ರೀಮಂತ ರೈತರ ಪರ ಇರುವಂಥ ಮತ್ತು ಅಭಿವೃದ್ಧಿಯಬಗ್ಗೆ ಪಕ್ಷಪಾತವನ್ನು ಹೊಂದಿರುವಂಥ ಕೆಲ ಪ್ರಗತಿಪರರೆಂದೆನಿಸಿಕೊಳ್ಳುವ ಜನರು ಮೇಧಾರವರ ಸತ್ಯಾಗ್ರಹವನ್ನು ಗಾಂಧೀಯವರ ಸತ್ಯಾಗ್ರಹದ ಅಣಕ ಆಟವೆಂದು ಹೀಯಾಳಿಸಿದ್ದಾರೆ. ಇದು ಸತ್ಯಾಗ್ರಹವೇ ಅಲ್ಲವೆಂದು ಟೀಕಿಸಿದ್ದಾರೆ. ಈ ಎಲ್ಲ ಮಾತುಗಳು ಸತ್ಯಾಗ್ರಹ ಶಾಸ್ತ್ರದಬಗ್ಗೆ ಇರುವ ಟೀಕಾಕಾರರ ಅಜ್ಞಾನವನ್ನು ತೋರಿಸುತ್ತದೆ.

ಮೇಧಾ ಎಲ್ಲ ದೃಷ್ಟಿಯಿಂದಲೂ ನಿಜವಾದ ಸತ್ಯಾಗ್ರಹಿಯಾಗಿದ್ದಾರೆ. ಅವರು ಚಾರಿತ್ರ್ಯ ಶುದ್ಧರಾಗಿದ್ದಾರೆ. ತಮ್ಮ ಉದ್ದೇಶ್ಯದ ಬಗ್ಗೆ ಸ್ಪಷ್ಟತೆ ಹೊಂದಿದ್ದಾರೆ. ಅಣೆಕಟ್ಟಿನ ನಿರ್ಮಾಣದಲ್ಲಿ ಅವರಿಗೆ ಯಾವ ಸ್ವಂತ ಹಿತಾಸಕ್ತಿಯೂ ಇಲ್ಲ. ತಮ್ಮ ಚಳುವಳಿ ಹಿಂಸಾಮಾರ್ಗ ಹಿಡಿಯದಂತೆ ಎಚ್ಚರವಹಿಸಿದ್ದಾರೆ. ಯಾವ ಎದುರಾಳಿಯ ಬಗ್ಗೆಯೂ ದ್ವೇಷವನ್ನು ಹೊಂದಿಲ್ಲ. ಅವರಿಗೆ ಯಾವ ರಾಜಕೀಯ ಉದ್ದೇಶವೂ ಇಲ್ಲ. ಮತ್ತು ಅವರು ಯಾರನ್ನೂ ಸುಪ್ರೀತಗೊಳಿಸಬೇಕಾಗಿಲ್ಲ. ಸಮಾಜದಲ್ಲಿ ಕಷ್ಟಕ್ಕೀಡಾಗಿರುವವರ, ಅದರಲ್ಲಿಯೂ ಮುಖ್ಯವಾಗಿ ಬಂಡವಾಳಶಾಹಿ ವಿಚಾರ ಆಧಾರಿತ ಅಭಿವೃದ್ಧಿಯ ಹೆಸರಿನಲ್ಲಿ ಕಷ್ಟಕ್ಕೀಡಾಗಿರುವವರ ಹಿತವೊಂದೆ ಅವರ ಏಕೈಕ ಗುರಿಯಾಗಿದೆ. ಪ್ರಪಂಚಕ್ಕೆ ಗಾಂಧೀಯವರು ಕೊಟ್ಟಿರುವ ಸತ್ಯಾಗ್ರಹದಂಥ ಸಾತ್ವಿಕ ಮತ್ತು ನಾಗರೀಕ ಅಸ್ತ್ರವನ್ನು ಸಾರ್ವಜನಿಕ ಸಮಸ್ಯೆಗಳ ಪರಿಹಾರಕ್ಕೆ ಉಪಯೋಗಿಸುವುದರ

ಮೂಲಕ ಬೆಳೆಯುತ್ತಿರುವ ಹಿಂಸಾಚಾರಕ್ಕೆ ಕಡಿವಾಣ ಹಾಕಬೇಕೆಂಬುದೆ ಅವರ ಉದ್ದೇಶವಾಗಿದೆ. ಮೇಧಾರವರ ೨೦ ವರ್ಷಗಳ ನಿರಂತರ ಹೋರಾಟದ ಫಲವಾಗಿ ನರ್ಮದಾ ಯೋಜನೆಯಿಂದ ವಿಶ್ವಬ್ಯಾಂಕ್ ಹಿಂದೆ ಸರಿಯುವಂತಾಯಿತು. ಅಲ್ಲದೆ ವಿಶ್ವದಾದ್ಯಂತ ಬೃಹತ್ ಯೋಜನೆಗಳ ಅಡಿಪಾಯದಲ್ಲಿ ಮೂಕಜನರ, ದುರ್ಬಲರ ಹೆಣಗಳಿವೆಯೆಂಬುದನ್ನು ಎತ್ತಿ ತೋರಿಸಲು ಮೇಧಾ ಸಮರ್ಥರಾಗಿದ್ದಾರೆ. ಅಭಿವೃದ್ಧಿ ಮತ್ತು ಲೋಕ ಕಲ್ಯಾಣ ಇವೆರಡೂ ಪರಸ್ಪರ ವಿರೋಧವಾಗದೆ ಅವು ಪೂರಕವಾಗುವಂತೆ ಹೊಸ ಸೂತ್ರವನ್ನು ವಿಶ್ವದ ಎಲ್ಲ ಸರ್ಕಾರಗಳು ಕಂಡುಕೊಳ್ಳುವಂತೆ ಮಾಡಲು ಮೇಧಾ ಯಶಸ್ವಿಯಾಗಿದ್ದಾರೆ.

ಗಾಂಧೀಯವರು ಹೇಳುತ್ತಿದ್ದಂತೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನರು ತಮ್ಮ ಹಕ್ಕುಗಳಿಗೆ ಧಕ್ಕೆ ಒದಗಿದಾಗ ಸತ್ಯಾಗ್ರಹವನ್ನು ಕೈಗೊಳ್ಳುವುದರ ಮೂಲಕ ಪರಿಹರಿಸಿಕೊಳ್ಳಬೇಕೆಂಬುದನ್ನು ಮೇಧಾರವರು ನರ್ಮದಾ ಹೋರಾಟದ ಮೂಲಕ ಸಿದ್ಧಪಡಿಸುತ್ತಿದ್ದಾರೆ. ಅಲ್ಲದೆ ಹೋರಾಟದ ಹಕ್ಕನ್ನು ಉಳಿಸಿಕೊಂಡು ಬರಲು ಪ್ರಯತ್ನಿಸುತ್ತಿದ್ದಾರೆ. ಗಾಂಧೀಯವರು ಹೇಳಿದಂತೆ ಸತ್ಯಾಗ್ರಹ ಬೆಳೆಯುತ್ತಿರುವ ಒಂದು ಶಾಸ್ತ್ರ. ಅಂಥ ಸತ್ಯಾಗ್ರಹವನ್ನು ಮೇಧಾರವರು ಕೈಗೆತ್ತಿಕೊಂಡು ಆ ಶಾಸ್ತ್ರವನ್ನು ಬೆಳೆಸಿದ್ದಾರೆ.

ಈಗ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವಿದೆ ಮತ್ತು ಜನರಿಂದ ಆಯ್ಕೆಗೊಂಡ ಪ್ರತಿನಿಧಿಗಳು ಸರ್ಕಾರವನ್ನು ನಡೆಸುತ್ತಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟೀಷರು ರಾಜ್ಯಭಾರ ಮಾಡುತ್ತಿದ್ದರು. ಆಗ ಗಾಂಧೀಯವರು ವಿದೇಶಿ ಸರ್ಕಾರದ ವಿರುದ್ಧ ಸತ್ಯಾಗ್ರಹವನ್ನು ಹೂಡಿದ್ದು ಸರಿಯಾದ ಕ್ರಮವಾಗಿತ್ತು. ಆದರೆ ಈಗ ಬದಲಾದ ಪರಿಸ್ಥಿತಿಯಲ್ಲಿ ಸತ್ಯಾಗ್ರಹ ತನ್ನ ಅರ್ಥವನ್ನು ಕಳೆದುಕೊಂಡಿದೆ ಎಂಬುದಾಗಿ ಕೆಲವರು ಹೇಳುತ್ತಾರೆ. ಪ್ರಜಾಪ್ರಭುತ್ವದಲ್ಲಿಯೂ ಸಹ ಚುನಾಯಿತ ಪ್ರತಿನಿಧಿಗಳಿಂದಲೂ ಶೋಷಣೆಯಾಗುವುದಿಲ್ಲವೆಂದು ಯಾರು ತಾನೆ ಹೇಳಲು ಸಾಧ್ಯ? ಇಂದಿನ ೧೦೩ಕೋಟಿ ಪ್ರಜಾಸಂಖ್ಯೆ ಸರ್ಕಾರದ ತಪ್ಪು ನೀತಿಗಳಿಂದಾಗಿ ಮತ್ತು ರಾಜಕಾರಣಿಗಳ ಸ್ವಾರ್ಥದಿಂದಾಗಿ ಶೋಷಣೆಗೆ ಒಳಗಾಗುತ್ತಿದೆ. ಸಮುದಾಯ-ಸಮುದಾಯಗಳಲ್ಲಿಯೇ ವೈರತ್ವ ಉಂಟಾಗುತ್ತಿದೆ. ಆದ್ದರಿಂದ ಇಂಥ ದುರ್ದಿನಗಳಲ್ಲಿ ಸತ್ಯಾಗ್ರಹ ಕೈಗೊಂಡರೇನು ತಪ್ಪು? ಗಾಂಧೀಯವರ ಈ ಮಾತನ್ನು ನಾವು ಗಮನಿಸಬಹುದು, "ಸತ್ಯಾಗ್ರಹದ ಶಬ್ದಾರ್ಥ ಸತ್ಯನಿಷ್ಠೆ ; ಹಠ. ಈ ನಿಷ್ಠೆ ಮತ್ತು ಹಠ ಅದರ ಅನುಯಾಯಿಗೆ ಅಗಾಧ ಶಕ್ತಿಯನ್ನು ಕೊಡುತ್ತದೆ. ಈ ಶಕ್ತಿಗೇ ಸತ್ಯಾಗ್ರಹವೆಂದು ಹೆಸರು. ಈ ಸತ್ಯಾಗ್ರಹವನ್ನು ಪತ್ನಿ, ಮಕ್ಕಳು, ಪ್ರಭುತ್ವ ನಡೆಸುವವರು, ಸಮಾನರಾದ ಪೌರರು, ಇಡೀ

ಜಗತ್ತು ಹೀಗೆ ಯಾರ ಮೇಲೆ ಬೇಕಾದರೂ ಸತ್ಯಾಗ್ರಹವನ್ನು ಆಚರಿಸಬಹುದು." ಈ ಮಾತಿನ ಪ್ರಕಾರ ಈಗ ಮೇಧಾರವರು ನಮ್ಮ ಚುನಾಯಿತ ಸರ್ಕಾರದ ಆಪತ್ಕಾರಿ ನೀತಿಯ ವಿರುದ್ಧ ಸತ್ಯಾಗ್ರಹವನ್ನು ಹೂಡಿದ್ದರಲ್ಲಿ ತಪ್ಪೇನಿದೆ? ಒಂದರ್ಥದಲ್ಲಿ ಗಾಂಧೀಯವರು ಪ್ರತಿಪಾದಿಸಿದ್ದ ಸತ್ಯಾಗ್ರಹದ ಸಿದ್ಧಾಂತವನ್ನು ಅವರು ಸಮರ್ಥವಾಗಿ ಬಳಸಿದ್ದಾರೆ.

೧೯೩೦ರಲ್ಲಿ ಗಾಂಧೀಯವರು ಉಪ್ಪಿನ ಸತ್ಯಾಗ್ರಹವನ್ನು ನಡೆಸಿದ್ದರು. ಉಪ್ಪು ಸಾರ್ವಜನಿಕ ಸೊತ್ತು. ಅದನ್ನು ಇಂಗ್ಲಿಷ್ ಸರ್ಕಾರವು ಒಡೆತನಕ್ಕೆ ಒಳಪಡಿಸಿಕೊಂಡಿತ್ತು. ಈಗ ನೀರು ಎಲ್ಲರ ಸೊತ್ತು. ಅದರ ಮೇಲೆ ಯಾವುದೇ ಸರ್ಕಾರದ ಒಡೆತನವಿರಕೂಡದು. ಪ್ರಕೃತಿ ಸಹಜವಾಗಿ ಹರಿಯುವ ನೀರನ್ನು ಜನರೇ ಸ್ವತಃ ತಮ್ಮ ಪರಿಶ್ರಮದಿಂದ ಮತ್ತು ಅನುಭವದಿಂದ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಉಪಯೋಗಿಸಿಕೊಳ್ಳುವ ಸ್ವಾತಂತ್ರ್ಯವಿರಬೇಕು. ಬೃಹತ್ ಅಣೆಕಟ್ಟುಗಳು, ಜಲವಿದ್ಯುತ್ ಸ್ಥಾವರಗಳು ಇಂದು ಇದ್ದುಳ್ಳವರ ಸ್ವತ್ತಾಗುತ್ತಿವೆ. ಇದನ್ನು ವಿರೋಧಿಸಬೇಕಾದುದು ಎಲ್ಲರ ಕರ್ತವ್ಯ. ಆ ನಿಟ್ಟಿನಲ್ಲಿ ಮೇಧಾರವರು ನಿರ್ಗತಿಕರ ವಾಣಿಯಾಗಿದ್ದಾರೆ ಮತ್ತು ಶಕ್ತಿಯಾಗಿದ್ದಾರೆ.

ಮೇಧಾರವರ ಸಹವರ್ತಿನಿಯಾಗಿರುವ ಸುಪ್ರಸಿದ್ಧ ಲೇಖಕಿ ಮತ್ತು ವಿಚಾರವಾದಿ ಅರುಂಧತಿ ರಾಯ್ ಹೇಳಿರುವಂತೆ ಮೇಧಾರವರ ಈ ಚಳುವಳಿ ಕೇವಲ ದೊಡ್ಡ ಅಣೆಕಟ್ಟುಗಳ ವಿರುದ್ಧ, ನದಿ ಜೋಡಣೆಗಳ ವಿರುದ್ಧವಾಗಿರದೆ ವಿಶ್ವಕ್ಕೆ ಭಾರತ ಕೊಟ್ಟಿರುವ ಶ್ರೇಷ್ಠ ಕೊಡುಗೆಯಾದ ಅಹಿಂಸೆಯನ್ನು ಉಳಿಸುವುದೂ ಆಗಿದೆ. ಅಹಿಂಸಕ ಚಳುವಳಿಗಳು ನಡೆದಾಗಲೆಲ್ಲಾ ವಿಶ್ವದ ಎಲ್ಲೆಡೆಯಲ್ಲಿ ಅದನ್ನು ದಮನ ಮಾಡಲಾಗುತ್ತಿದೆ. ಮೇಧಾರವರು ನಡೆಸುತ್ತಿರುವಂಥ ಚಳುವಳಿಗಳನ್ನು ಗೌರವಿಸದಿದ್ದರೆ ಹಿಂಸಾ ಸಾಧನಗಳನ್ನು ಕೈಗೆತ್ತಿಕೊಳ್ಳುವವರಿಗೆ ಪ್ರೋತ್ಸಾಹಿಸಿದಂತಾಗುತ್ತದೆ. ಕಾಶ್ಮೀರ, ನಾಗಾಲ್ಯಾಂಡ್, ಮಿಜೋರಾಂ ಮುಂತಾದ ರಾಜ್ಯಗಳಲ್ಲಿ ಹಾಗೂ ಆಂಧ್ರದಲ್ಲಿ ನಡೆಯುತ್ತಿರುವ ಹಿಂಸಾಚಾರವೆಲ್ಲ ಇದಕ್ಕೆ ಉದಾಹರಣೆಯಾಗಿದೆ.

ನರ್ಮದಾ ಅಣೆಕಟ್ಟಿನ ವಿಷಯವನ್ನು ರಾಜಕೀಯ ಪಕ್ಷಗಳು ರಾಜಕಾರಣದಿಂದ ದೂರವಿಟ್ಟು ಸಂಪೂರ್ಣವಾಗಿ ಮಾನವೀಯತೆಯ ಅಂಶಗಳನ್ನೇ ಆಧಾರವಾಗಿಟ್ಟುಕೊಂಡು ಪರಿಶೀಲಿಸಲಿ. ಸತ್ಯಾಗ್ರಹದ ಬೀಡಾದ ಭಾರತದಲ್ಲಿ ಪ್ರತಿಯೊಬ್ಬರೂ ಸತ್ಯಾಗ್ರಹಿಯ ಭಾವನೆಯಿಂದ ಈ ವಿಷಯವನ್ನು ತಿಳಿಯುವಂತಾಗಲಿ. ಇಂಥ ಪ್ರಯತ್ನದತ್ತ ಮೇಧಾರವರ ಸತ್ಯಾಗ್ರಹ ಒಂದು ಶುದ್ಧ ರಚನಾತ್ಮಕ ಸತ್ಯಾಗ್ರಹವಾಗಿದೆ.

* * *

ನಿಸರ್ಗೋಪಚಾರ ತಜ್ಞ ಸಾಹಸಿ ವಿಠ್ಠಲದಾಸ ಮೋದಿಯವರ ಪರಿಚಯ

– ಡಾ॥ ಜಿ.ವಿ.ಕುಲಕರ್ಣಿ

ಉತ್ತರ ಭಾರತದಲ್ಲಿಯೇ ಅತಿ ದೊಡ್ಡ ನಿಸರ್ಗೋಪಚಾರ ಕೇಂದ್ರವೆಂದರೆ ಗೋರಖಪುರದಲ್ಲಿರುವ ಮೋದಿಯವರ 'ಆರೋಗ್ಯ ಮಂದಿರ'. ಅದರ ಜನಕ ಅಭಿನವ ಧನ್ವಂತರಿಯೆಂದೇ ಪ್ರಸಿದ್ಧಿ ಪಡೆದ ವಿಠ್ಠಲದಾಸ ಮೋದಿ.

ತನ್ನ ಜೀವಮಾನದಲ್ಲೇ ದಂತಕತೆಯಾಗಿದ್ದ ವಿಠ್ಠಲದಾಸ ಮೋದಿಯವರನ್ನು ಪ್ರತ್ಯಕ್ಷ ಕಾಣುವ, ಅವರೊಡನೆ ಎರಡು ಮೂರು ಸಲ ಗಂಟೆಗಟ್ಟಲೆ ಕಾಲ ಕಳೆಯುವ ಸೌಭಾಗ್ಯ ನನ್ನದಾಗಿತ್ತು. ಅವರ ಜೀವನ ಮತ್ತು ಸಾಧನೆಗಳ ಮೇಲೆ ಬೆಳಕು ಚೆಲ್ಲುವ ಪುಸಕ 'ವಿಠ್ಠಲದಾಸ ಮೋದಿ ಹೋನೆ ಕಾ ಅರ್ಥ'. ಇನ್ನೊಂದು ಪುಸ್ತಕ ಅವರೇ ಬರೆದ ಸುಪ್ರಸಿದ್ಧವಾದ ಹಾಗೂ ದಾಖಲೆ ನಿರ್ಮಿಸಿದ ಕೃತಿ 'ರೋಗದ ಸರಳ ಚಿಕಿತ್ಸೆ' ಇವು ಅವರು ನನಗೆ ಕೊಟ್ಟ ಅವಿಸ್ಮರಣೀಯ ಕಾಣಿಕೆಗಳಾಗಿವೆ. ಈ ಪುಸ್ತಕಗಳ ಓದು ನನಗೆ ಹೊಸ ಸ್ಫೂರ್ತಿಯನ್ನು ನೀಡಿದೆ, ಬೆಳಕನ್ನು ಚೆಲ್ಲಿದೆ.

ರಾಜಸ್ಥಾನದ ನವಲಗಢದಿಂದ ೩೦ ಕಿಲೋ ಮೀಟರ್ ದೂರದಲ್ಲಿರುವ ಚಿಕ್ಕ ಹಳ್ಳಿ ಗೌಡಜಿ ಕಾ ಗುಢಾ. ಅಲ್ಲಿ ಇವರ ಪೂರ್ವಜರು ಕಟ್ಟಿಸಿದ್ದ ಮನೆ ಇದೆ. ಬದಿಯಲ್ಲಿ ಒಂದು 'ಸತಿ ಮಂದಿರ' ಇದೆ. ಇವರ ಮನೆತನ ಗೋರಖಪುರಕ್ಕೆ ವಲಸೆ ಬಂದಿದ್ದರೂ ಪ್ರತಿ ವರ್ಷ ಭಾದ್ರಪದ ಮಾಸದ ಸಪ್ತಮಿಯ ದಿನ ಇವರ ಪರಿವಾರದವರೆಲ್ಲ ತಮ್ಮ ಹಳ್ಳಿಗೆ ಬಂದು ಪೂಜೆ ಸಲ್ಲಿಸುತ್ತಾರೆ. ಇವರೀಗ ಗೋರಖಪುರದವರೇ ಆಗಿದ್ದಾರೆ. ಗೋರಖಪುರ ಎಂದೊಡನೆ ಸಚಿತ್ರ 'ಕಲ್ಯಾಣ' ಧಾರ್ಮಿಕ ಮಾಸ ಪತ್ರಿಕೆ, ಸುಲಭ ಬೆಲೆಯಲ್ಲಿ ಭಗವದ್ಗೀತೆಯನ್ನು ಅಚ್ಚುಹಾಕುವ ಗೋರಖಪುರ್' ಪ್ರೆಸ್ ನೆನಪಿಗೆ ಬರುತ್ತವೆ. ಈಗ ಇವರ 'ಆರೋಗ್ಯ ಮಂದಿರ' ಗೋರಖಪುರದ ಪ್ರಸಿದ್ಧಿಗೆ ಮತ್ತೊಂದು ಕಾರಣವಾಗಿದೆ.

ವಿಠ್ಠಲದಾಸರು ೧೯೧೨ ರಲ್ಲಿ ಗೋರಖಪುರದಲ್ಲಿ ಜನಿಸಿದರು. ಉಚ್ಚ ವ್ಯಾಸಂಗಕ್ಕಾಗಿ ಬನಾರಸ ಹಿಂದು ವಿಶ್ವವಿದ್ಯಾಲಯ ಸೇರಿದರು. ಇವರಲ್ಲಿ ಇಚ್ಛಾಶಕ್ತಿ, ಸಂಕಲ್ಪ ಶಕ್ತಿ ಅಗಾಧವಾಗಿತ್ತು. ಇವರು ಹಾಸ್ಟೆಲ್ ಸೇರಿದಾಗ ಇವರ ವಿಂಗ್‌ನಲ್ಲಿ ೧೩ ಕೋಣೆ ಆರೋಗ್ಯ ಮಂದಿರಗಳಿದ್ದವು. ೨೫ ವಿದ್ಯಾರ್ಥಿಗಳಿದ್ದರು. ಒಂದು ಕೋಣೆಯಲ್ಲಿ ಇಬ್ಬರು ವಿದ್ಯಾರ್ಥಿಗಳನ್ನು ಸೇರಿಸಲಾಯಿತು. ಒಬ್ಬ ವಿದ್ಯಾರ್ಥಿಗೆ ಮಾತ್ರ ಸಿಂಗಲ್ ರೂಮ್ ದೊರೆಯುವುದು ಸಾಧ್ಯವಿತ್ತು. ಎಲ್ಲರೂ ಆ ರೂಮಿಗಾಗಿ ಸ್ಪರ್ಧಿಸುವವರೇ. ವಾರ್ಡನ್ ಎಲ್ಲರಿಗೂ 'ಒಂದು ಹೆಸರು ಬರೆದು ಒಂದು ಬಾಕ್ಸ್‌ನಲ್ಲಿ ಹಾಕಲು ಹೇಳಿದರು. ಒಂದು ಹೆಸರನ್ನು ಡ್ರಾ ಮಾಡೋಣ,. ಅದೃಷ್ಟವಂತರಿಗೆ ರೂಮು ದೊರೆಯುತ್ತದೆ' ಎಂದರು. ಮೋದಿಯವರು ಚೇಷ್ಟೆಗೆ "ಎಲ್ಲರೂ ನನ್ನ ಹೆಸರು ಬರೆಯಿರಿ"

ಎಂದರು. ಯಾರೂ ಒಪ್ಪಲಿಲ್ಲ. "ನೀವು ಯಾವ ಹೆಸರು ಬರೆದರೂ ಆ ರೂಮು ದೊರೆಯುವುದು ನನಗೇ" ಎಂದು ಘೋಷಿಸಿದರು. ಮುಂದೆ ಇವರಿಗೇ ಆ ರೂಮು ದೊರೆತಾಗ ಎಲ್ಲರೂ ತಬ್ಬಿಬ್ಬಾದರು. ಯಾವುದನ್ನೇ ಇಚ್ಛಿಸಿದರೂ ಅದನ್ನು ಪಡೆಯುವ ಸಂಕಲ್ಪ ಅವರಲ್ಲಿತ್ತು.

ಕತೆ, ಕವಿತೆ ಬರೆಯುತ್ತಿದ್ದರು. ಹಿಂದೀ ಸಾಹಿತ್ಯ ಅವರಿಗೆ ಪ್ರಿಯವಾದ ವಿಷಯವಾಗಿತ್ತು. ಬಿ.ಎ. ಆದಮೇಲೆ ಎಂ.ಎ ಮಾಡಬೇಕು ಪ್ರಾಧ್ಯಾಪಕನಾಗಬೇಕೆಂದು ಅವರ ಇಚ್ಛೆಯಾಗಿತ್ತು. ಬಿ.ಎ.ನಂತರ ಮೂರು ವರ್ಷ ಅವರ ದೇಹಸ್ಥಿತಿ ಸರಿಯಾಗಿರಲಿಲ್ಲ. ಯಾವ ಡಾಕ್ಟರರೂ ಯಾವ ಔಷಧಿಯೂ ಅವರನ್ನು ಗುಣಪಡಿಸಲಿಲ್ಲ. ಅವರ ಮುಂದಿನ ಓದಿಗೆ ಭಂಗ ಬಂತು. ಆದರೆ ಇದು ಅವರ ಜೀವನದಲ್ಲಿ ಒಂದು ಪರಿವರ್ತನೆಯನ್ನೂ ತಂದಿತು. ಅವರು ನಿಸರ್ಗ ಚಿಕಿತ್ಸೆಯ ಮೇಲಿದ್ದ ಕೃಷ್ಣ ಮುರಾರಿ ಮೋದಿ, ವಿಠ್ಠಲದಾಸ ಮೋದಿ, ಜಿ.ವಿ.ಕುಲಕರ್ಣಿಯವರು ಪುಸ್ತಕಗಳನ್ನು ಅಧ್ಯಯನ ಮಾಡತೊಡಗಿದರು. ತಮ್ಮ ರೋಗವನ್ನು ತಾವೇ ವಾಸಿ ಮಾಡಿಕೊಂಡರು. ಅವರ ಸ್ವಾಸ್ಥ್ಯ ಮೊದಲಿಗಿಂತಲೂ ಅಧಿಕ ಉತ್ತಮವಾಯಿತು. ತಾವು ಪಡೆದ ಲಾಭ ಇತರರಿಗೆ ಹಂಚತೊಡಗಿದರು. ೧೯೪೦ ರಲ್ಲಿ ಇವರು ಗೋರಖಪುರದಲ್ಲಿ 'ಆರೋಗ್ಯ ಮಂದಿರ' ಸ್ಥಾಪಿಸಿದರು. ಅವರಿಗಾಗ ೩೨ವರ್ಷ. ಅವರು ರಾಷ್ಟ್ರೀಯ ಚಳುವಳಿಯಲ್ಲಿ ಮುನ್ನುಗ್ಗಿ ಜೈಲು ವಾಸ ಅನುಭವಿಸಿದರು. ಜೈಲಿನಲ್ಲಿ ಕೂಡ ಅವರು ನಿಸರ್ಗ ಚಿಕಿತ್ಸೆಗೆ ಸಂಬಂಧಪಟ್ಟ ಪುಸ್ತಕಗಳ ಆಳವಾದ ಅಧ್ಯಯನ ನಡೆಸಿದರು. ೧೯೪೦ ರಲ್ಲಿ ಅವರು 'ಆರೋಗ್ಯ'ಎಂಬ ಮಾಸ ಪತ್ರಿಕೆಯನ್ನು ಪ್ರಾರಂಭಿಸಿದರು. ಇದಕ್ಕೆ ಅಭೂತಪೂರ್ವ ಯಶಸ್ಸು ದೊರಕಿತು. ಅಂದಿನಿಂದ ಇಂದಿನವರೆಗೆ ಪತ್ರಿಕೆ ಅವ್ಯಾಹತವಾಗಿ ನಡೆಯುತ್ತಿದೆ. ಈಗ ಅವರ ಮಕ್ಕಳು ಅದನ್ನು ಸಂಪಾದಿಸುತ್ತಾರೆ. ೧೯೫೧ ರಲ್ಲಿ ಅವರ ಪ್ರಥಮ ಪುಸ್ತಕ, 'ರೋಗದ ಸರಳ ಚಿಕಿತ್ಸೆ' ಹೊರಬಂತು. ಆ ಕಾಲದಲ್ಲಿ ಒಂದು ಸಾವಿರ ಪ್ರತಿ ಸಾಕಾಗುತ್ತಿತ್ತು. ಇವರ ಉತ್ಸಾಹ ನೋಡಿ ಮಿತ್ರರು, ೨೦೦೦ ಪ್ರತಿ ಪ್ರಕಟಿಸಬಹುದು ಆದರೆ ಮಾರಾಟವಾಗದಿದ್ದರೆ ಗೋಡೌನಿನಲ್ಲಿ ಕೊಳೆಯುತ್ತವೆ. ಹಾಕಿದ ಹಣ ದಂಡವಾಗುತ್ತದೆ' ಎಂದು ಬುದ್ಧಿ ಹೇಳಿದರು. ಆದರೆ ಮೋದಿಯವರಿಗೆ ತಮ್ಮ ಬಗ್ಗೆ, ತಮ್ಮ ಕೃತಿಯ ಮಾರಾಟದ ಬಗ್ಗೆ ವಿಶ್ವಾಸವಿತ್ತು. ಪ್ರಿಂಟರನ್ನು ಕರೆದು ಕೇಳಿದರು, 'ಎರಡು ಸಾವಿರ ಪ್ರತಿಗೆ ಎಷ್ಟು ವೆಚ್ಚ?' ಎಂದು. 'ನಾಲ್ಕು ಸಾವಿರ' ಎಂದ. 'ಐದು ಸಾವಿರ ಪ್ರತಿಗಳಿಗೆ ಎಷ್ಟು? ಎಂದು ಕೇಳಿದಾಗ, 'ಏಳು ಸಾವಿರ' ಅವನೆಂದ. 'ಹಾಗಾದರೆ ಎಂಟು ಸಾವಿರ ಪ್ರತಿ ಮುದ್ರಿಸಿದರೆ?' ಎಂದು ಕೇಳಿದರು. 'ಎಂಟು ಸಾವಿರ' ಎಂಬ ಉತ್ತರ ಬಂತು. ಮೋದಿಯವರು ತಮ್ಮ ಮನದಲ್ಲಿಯೇ ಲೆಕ್ಕ ಹಾಕಿದರು. ಪುಸ್ತಕದ ಬೆಲೆ ಮೂರು ರೂಪಾಯಿ ಇಡಬೇಕು. ಒಂದು ರೂಪಾಯಿ ಕಮೀಶನ್ ಹೋದರೂ. ಒಂದು ರೂಪಾಯಿ ಲಾಭವಾಗುತ್ತದೆ ತಮ್ಮ 'ಆರೋಗ್ಯ ಮಂದಿರ' ದಲ್ಲಿ ದಾಖಲಾದವರಿಗೂ ೨೫% ರಿಯಾಯಿತಿ ನೀಡಬೇಕು ಎಂದೂ ನಿಶ್ಚಯಿಸಿದರು. ಎಂಟು ಸಾವಿರ ಪ್ರತಿ, ಅದೂ ಮೊದಲ ಮುದ್ರಣದಲ್ಲಿ

ಯಾರಿಗೂ ಈ ದುಸ್ಸಾಹಸ ಸರಿಬರಲಿಲ್ಲ. ಎಲ್ಲ ಮಿತ್ರರು ತಪ್ಪಿದರು. ಮೋದಿಯವರೇ ಸರಿಯಾಗಿದ್ದರು ಒಂದೇ ವರ್ಷದಲ್ಲಿ ಎಲ್ಲ ಪುಸ್ತಕ ಮಾರಾಟವಾದವು. ಎರಡನೆಯ ಮುದ್ರಣ ಮತ್ತೆ ೫೦೦೦ ಪ್ರತಿಸಿದ್ಧವಾದವು. ಮುಂದೆ ಪರಿಷ್ಕರಿಸಿದರು, ಹೆಚ್ಚಿನ ಮಾಹಿತಿ ಸೇರಿಸಿದರು. ನನಗೆ ಅವರು ಕೊಟ್ಟ ಪ್ರತಿ, ೧೯೯೩ ರಲ್ಲಿ ಪ್ರಕಟಗೊಂಡ ಹದಿಮೂರನೆಯ ಪುನರ್‌ಮುದ್ರಣ. ೧೯೯೪ ರಲ್ಲಿ ಅವರ ಮಗ ಕೃಷ್ಣ ಮುರಾರಿಯವರ ಮನೆಯಲ್ಲಿ ಬೇಟಿಯಾಗಿದ್ದೆ. ಅದೇ ಅವರ ಅಂತಿಮ ಬೇಟಿಯಾಗಿತ್ತು. ಅದೇ ವರ್ಷ ನಾನು ಪ್ರಕಟಿಸುತ್ತಿದ್ದ 'ಗುಡ್‌ಬಾಯ್ ಡಾಕ್ಟರ್' ಎಂಬ ಪ್ರತಿಕೆಯಲ್ಲಿ ಅವರೊಂದಿಗೆ ನಾನು ತೆಗೆಸಿದ ಭಾವಚಿತ್ರ ಪ್ರಕಟವಾಗಿತ್ತು.

ಈ ಪುಸ್ತಕಕ್ಕೆ ಸಂಬಂಧಿಸಿದ ಒಂದು ರೋಚಕ ಘಟನೆಯ ಬಗ್ಗೆ ಇಲ್ಲಿ ಬರೆಯಬೇಕೆನಿಸುತ್ತದೆ. ಒಂದು ದಿನ ಈ ಪುಸ್ತಕದ ೫೦೦ ಪ್ರತಿಗಳಿಗಾಗಿ ಒಂದೇ ಪಾರ್ಟಿಯಿಂದ ಆರ್ಡರ್ ಬಂತಂತೆ. ವಿಠ್ಠಲದಾಸರಿಗೆ ಪರಮಾನಂದ, ಪರಮಾಶ್ಚರ್ಯ ಕೂಡ. ನಂತರ ಕೆಲವು ತಿಂಗಳ ಮೇಲೆ ಸತ್ಯ ಸಂಗತಿ ತಿಳಿಯಿತಂತೆ. ಒಬ್ಬ ವ್ಯಕ್ತಿ ಇವರ 'ಆರೋಗ್ಯ ಮಂದಿರ' ದಲ್ಲಿ ಇದ್ದನಂತೆ. ತನ್ನಕಾಯಿಲೆಯನ್ನು ಗುಣಪಡಿಸಿಕೊಂಡ ಮೇಲೆ ಮರಳಿದ್ದನಂತೆ.. ಅವನು ಮುಂದೆ ಒಂದು ಡಿಸ್ಟ್ರಿಕ್ಟ್ ಬೋರ್ಡಿನ ಚೇರಮನ್ನನಾದನಂತೆ. ಅವನು ತನ್ನ ಜಿಲ್ಲೆಯ ಎಲ್ಲ ಲೈಬ್ರರಿಗಳಲ್ಲಿ ಈ ಪುಸ್ತಕ ಇರಬೇಕೆಂದು ಶಿಫಾರಸ್ಸು ಮಾಡಿ ಐದುನೂರು ಪ್ರತಿ ತರಿಸಿದ್ದನಂತೆ.

ವಿಠ್ಠಲದಾಸರಿಗೆ ಮೂರು ಗಂಡುಮಕ್ಕಳು. ಚತುರ್ಭುಜ, ಕೃಷ್ಣ ಮುರಾರಿ, ವಿಮಲ್ ಕುಮಾರ. ಮೂವರೂ ಎಂ.ಬಿ.ಬಿ.ಎಸ್. ಪದವಿ ಗಳಿಸಿದ ಡಾಕ್ಟರರೇ. ತಂದೆಯ ಪ್ರಭಾವ ಮಕ್ಕಳ ಮೇಲೆ ಎಷ್ಟೋಂದಾಗಿತ್ತೆಂದರೆ, ಅವರೆಲ್ಲ ತಮ್ಮ ಅಲೋಪತಿ ಪ್ರಾಕ್ಟಿಸ್ ಬಿಟ್ಟು ತಂದೆಯ ಭವ್ಯವಾದ ಕ್ಯಾಂಪಸ್‌ನಲ್ಲಿ ನಿಸರ್ಗೋಪಚಾರ ಚಿಕಿತ್ಸೆ ಕೊಡಲು ಮಗ್ನರಾದರು. ಇದು 'ನ ಭೂತೋ ನ ಭವಿಷ್ಯತಿ' ಆದ ಸಂಗತಿ. ಎರಡನೆಯ ಮಗ, (ನನ್ನ ಮಿತ್ರ) ಕೃಷ್ಣ ಮುರಾರಿ ಉಚ್ಚ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ತೆರಳಿದರು. ಅಲ್ಲಿ ಕಲಿತದ್ದು ನಿಸರ್ಗ ಚಿಕಿತ್ಸೆ ಹಾಗೂ ಔಷಧಿರಹಿತ ಚಿಕಿತ್ಸೆಗೆ ಅನುಕೂಲವಾದ 'ಒಸ್ಟಿಯೋಪಥಿ' ಎಂಬ ಮಸಾಜುಕಲೆ. ಒಬ್ಬ ಪೇಶಂಟ ನೋಡಲು ಮುಂಬೈಗೆ ಬಂದರು. ಅವರ ಕೈಚಳಕ, 'ಹೀಲಿಂಗ್ ಟಚ್' ಗೆ ಮುಂಬೈ ಜನ ಮೋಹಿತರಾದರು. ಕೋಲಾಬಾದ ಕಫ್ ಪರೇಡ್‌ನಲ್ಲಿ ಪ್ರ್ಯಾಕ್ಟೀಸ್ ಶುರು ಮಾಡಿದರು. ಹತ್ತು ವರ್ಷಗಳ ಕೆಳಗೆ ಕರ್ಜತ್‌ನಲ್ಲಿ ೫೦ ಎಕರೆ ಜಾಗೆಯಲ್ಲಿ ೮೦ ಕಾಟೇಜ್ ಕಟ್ಟಿದ್ದಾರೆ, 'ಕಾಯಕಲ್ಪ' ಕೇಂದ್ರ ತೆರೆದಿದ್ದಾರೆ. ಅಲ್ಲಿ ಈಜುಗೊಳವಿದೆ, ನಿಸರ್ಗ ಚಿಕಿತ್ಸೆಯ ಎಲ್ಲ ಸೌಲಭ್ಯ ಅಲ್ಲಿದೆ.

ವಿಠ್ಠಲದಾಸರಿಗೆ ಕೃಷ್ಣಾ ಎಂಬ ಹಿರಿಯ ಮಗಳಿದ್ದಾಳೆ. ಅವಳ ಮದುವೆ ಮಾಡಲು ಹೊರಟಾಗ ಇವರಲ್ಲಿ ಹಣವಿರಲಿಲ್ಲ. ಕನಿಷ್ಟ ೨೦–೨೫ ಸಾವಿರ ಖರ್ಚು ಮಾಡಬೇಕಿತ್ತು. ಆಗ ಅವರ 'ಆರೋಗ್ಯ' ಪತ್ರಿಕೆಗೆ ಎಂಟು ಸಾವಿರ ಚಂದಾದಾರರಿದ್ದರು. ಅದರ ವಾರ್ಷಿಕ ಚಂದಾ ನಾಲ್ಕು ರೂಪಾಯಿ ಇತ್ತು. ಅದರ ಚಂದಾಹಣ ಒಂದು

ರೂಪಾಯಿ ಹೆಚ್ಚಿಸಿದರು. ಎಂಟು ಸಾವಿರ ಮಗಳ ಹೆಸರಿಗೆ ತೆಗೆದಿಟ್ಟರು. ಮೂರು ವರ್ಷಗಳಲ್ಲಿ ಆ ಹಣ ೨೪ ಸಾವಿರ ಆಯಿತು. ಆಗ ಅವರು ಮಗಳ ಮದುವೆ ಮಾಡಿದರು. ಇವರು ಒಂದು ರೀತಿಯಲ್ಲಿ ಆದರ್ಶವಾದಿಗಳು, ಗಾಂಧೀಜಿಯವರ ಭಕ್ತರು. ಒಂದು ಪೈಸೆ ಕೂಡಾ 'ದಹೆಜ್' (ವರದಕ್ಷಿಣೆ) ಪಡೆಯದೆಯೆ ಗಂಡು ಮಕ್ಕಳ ಮದುವೆ ಮಾಡಿದರು. ಮೊದಲನೆಯ ಮಗ ಚತುರ್ಭುಜನಿಗೆ ಉಮಾ ಎಂಬ ಕನ್ಯೆಯನ್ನು ಆರಿಸಿದರು. ಎರಡನೆಯ ಮಗ ಅದೇ ಇಂಗ್ಲೆಂಡಿನಿಂದ ಮರಳಿದ್ದ. ಹಣ ಸುರಿಯುವವರಿಗೆ ಕಡಿಮೆ ಇರಲಿಲ್ಲ. ರಾಸಾಯನಶಾಸ್ತ್ರದಲ್ಲಿ ಎಂ.ಎಸ್. ಸಿ ಪದವೀಧರೆಯಾದ ಉಷಾ ಎಂಬುವಳನ್ನು ಸೊಸೆಯಾಗಿ ಪಡೆದರು. ಮೂರನೆಯ ಮಗನ ಮದುವೆಯ ಘಟನೆ ಮೋಜಿನದಾಗಿದೆ. ಅವನು (ವಿಮಲಕುಮಾರ) ಗೋರಖಪುರ್ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದ. ಆ ಕಾಲೇಜಿನ ಮಹಿಳಾ ಹಾಸ್ಟೆಲ್‌ನಲ್ಲಿ ಒಂದು ದಿನ ಲೈಟು, ನೀರು ಇರಲಿಲ್ಲ. ವಿದ್ಯಾರ್ಥಿನಿಯರಿಗೆ ಊಟದ ಸಮಸ್ಯೆಯಾಯಿತು. ಪ್ರಿನ್ಸಿಪಾಲರು ನಾಲ್ಕನೆಯ ವರ್ಷದ ವಿದ್ಯಾರ್ಥಿಯಾಗಿದ್ದ ವಿನಯಕುಮಾರನನ್ನು ಕರೆದು ಸಮಸ್ಯೆ ವಿವರಿಸಿ ಹೇಳಿದರು. "ನಿಮ್ಮ 'ಆರೋಗ್ಯ ಮಂದಿರ' ದಲ್ಲಿ ಮೆಸ್ ಇದೆ. ಅಲ್ಲಿ ಈ ಹುಡುಗಿಯರಿಗೆ ಊಟದ ವ್ಯವಸ್ಥೆ ಮಾಡಲು ನಿಮ್ಮ ತಂದೆಯವರಿಗೆ ನನ್ನ ಪರವಾಗಿ ವಿನಂತಿಸುವೆಯಾ?" ಅವನು ಎಲ್ಲ ಹುಡುಗಿಯರನ್ನು ಕರೆದುಕೊಂಡು ಬಂದನು. ಅವರಿಗೆಲ್ಲ ಊಟದ ವ್ಯವಸ್ಥೆಯಾಯಿತು. ಅದರಲ್ಲಿ ಮೊದಲನೆಯ ವರ್ಷದ ವಿದ್ಯಾರ್ಥಿನಿಯಾಗಿದ್ದ ಸ್ಮಿತಾ ಎಂಬುವಳು ಲೀಡರ್ ಆಗಿದ್ದಳು. ಅವಳನ್ನು ಕಂಡು ಆಕರ್ಷಿತರಾದ ವಿಠ್ಠಲದಾಸರು ಅವಳಿಗೆ ಕೇಳಿದರು, "ಎಂ.ಬಿ.ಬಿ.ಎಸ್, ಆದ ಮೇಲೆ ಏನು ಮಾಡುವ ವಿಚಾರವಿದೆ?" ಎಂದು . ಸ್ಮಿತಾ ಧೈರ್ಯದಿಂದ ಉತ್ತರಿಸಿದಳು, "ಆರಾಮಾಗಿರಲು ಒಂದು ಮನೆ ಸಿಕ್ಕರೆ ನಾನು ನೌಕರಿ ಮಾಡುವುದಿಲ್ಲ". "ಸಿಗುತ್ತದೆ" ಎಂದು ಆಶೀರ್ವದಿಸಿದರು. ಮುಂದೆ ಅದೇ ಕನ್ಯೆ ಅವರ ಸೊಸೆಯಾಗಿ ಬಂದಳು. ಅದು ಅಂತರ್-ಜಾತಿ ವಿವಾಹ ಎಂದು ಕೆಲವರು ಹುಬ್ಬೇರಿಸಿದರು. ವಿಠ್ಠಲದಾಸರದು ದೊಡ್ಡ ಮನಸ್ಸು. ಅವಳನ್ನು ಮಗಳಾಗಿ ಸ್ವೀಕರಿಸಿದರು. ಅವಳು ಒಂದು ಲೇಖನದಲ್ಲಿ ಈ ಮನೆಯನ್ನು ಎರಡನೆಯ ತವರುಮನೆ ಎಂದು ಕರೆದಿದ್ದಾಳೆ.

ಇವರ 'ಆರೋಗ್ಯ ಮಂದಿರ' ಇಷ್ಟೊಂದು ಖ್ಯಾತಿ ಪಡೆಯಲು ಇನ್ನೊಂದು ಕಾರಣವೆಂದರೆ ಇವರ ಮಕ್ಕಳೆಲ್ಲ ಅಲೋಪಥಿಯಲ್ಲಿ ತಜ್ಞರು. ನಿಸರ್ಗಚಿಕಿತ್ಸೆಯಲ್ಲೂ ಪರಿಣಿತರು. ಔಷಧಿ ಇಲ್ಲದೆ ಇವರು ನಡೆಸುವ 'ಹೀಲಿಂಗ್ ಮಿರೆಕಲ್' ನೋಡಲು ಜನ ಬರತೊಡಗಿದರು, ಇವರು ಬಳಸುತ್ತಿದ್ದ ಸಾಧನ ಗಾಳಿ, ನೀರು, ಬಿಸಿಲು, ಮಣ್ಣು ಆಹಾರದಲ್ಲಿ ಪಥ್ಯ, ಹೊಟ್ಟೆಯನ್ನು ಶುದ್ಧಗೊಳಿಸಲು ಉಪವಾಸ ಮತ್ತು ಎನಿಮಾ ಪ್ರಯೋಗ.

ಸಾಭಾರ:- ಕರ್ನಾಟಕ ಮಲ್ಲ, ಮುಂಬೈ.

***

ಜೀವನ ಕುತೂಹಲ

-ಜಿ.ಟಿ.ನಾರಾಯಣರಾವ್

ರಾಮಾಯಣದ ಆರಂಭದಲ್ಲಿ ಬರುವ ಒಂದು ಪ್ರಸಂಗ. ಸ್ವಚ್ಛ ಆಕಾಶದಲ್ಲಿ ಮೆರೆಯುತ್ತಿರುವ ಹುಣ್ಣಿಮೆ ಚಂದ್ರಬಿಂಬದಿಂದ ಶಿಶುರಾಮ ಮೋಹಿತನಾಗಿ ತನಗದನ್ನು ತಂದುಕೊಡಬೇಕೆಂದು ಚಂಡಿ ಹಿಡಿದಿದ್ದಾನೆ. ಆದರೆ ಅದು ಈಡೇರಿಸಲಾಗದ ಬಯಕೆ. ಈ ಬಯಕೆಯ ಮೂಲವೇನು? ಕುತೂಹಲ ಅಲ್ಲವೇ? ಯಾವುದೋ ಒಂದು ಘಟನೆ ಅಥವಾ ದೃಶ್ಯ ಒಬ್ಬಾತನಲ್ಲಿ ಹೊಸತೊಂದು ಮೇಲು ನೋಟಕ್ಕೆ ಆ ಘಟನೆಗೆ ಏನೂ ಸಂಬಂಧವಿರದ, ಪ್ರಶ್ನೆಯನ್ನು ಮೂಡಿಸಬಹುದು.

ಉದಾಹರಣೆಗೆ ತೊಟ್ಟು ಕಳಚಿದ ಹಣ್ಣು ಮರದಿಂದ ನೆಲಕ್ಕೆ ಬೀಳುವುದುವುದು ತೀರ ಸಾಮಾನ್ಯ ಘಟನೆ. ಅಯಾಚಿತವಾಗಿ ಲಭಿಸಿದ ಆ ಹಣ್ಣನ್ನು ಹೆಕ್ಕಿ ತಿನ್ನುವುದೇ ಸಾಧಾರಣ ನಡವಳಿಕೆ. ಆದರೆ ಒಬ್ಬ ಯುವ ವಿಜ್ಞಾನಿಯ ಮನದಲ್ಲಿ ಹಣ್ಣು ನೆಲಕ್ಕೇಕೆ ಬಿತ್ತು, ಬಾನಿಗೇಕೆ ನೆಗೆಯಲಿಲ್ಲ ಎಂಬ ಪ್ರಶ್ನೆ ಎದ್ದಿತು. ಇದರ ಹಿನ್ನೆಲೆಯಲ್ಲಿ ವರ್ತಿಸಿದ ಗುಣವೇ ಕುತೂಹಲ.

ಶಿಶುರಾಮನಲ್ಲಿ ಆದಿಕವಿ ವಾಲ್ಮೀಕಿ ಮನುಕುಲದ ನಿರಂತರ ಅಭೀಪ್ಸೆಯನ್ನು ಗರ್ಭಿಸಿಟ್ಟಿದ್ದಾನೆ. ಗೋಪಾಲಕೃಷ್ಣ ಅಡಿಗರ ನುಡಿಗಳಲ್ಲಿ ಅದು, "ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ?"ಇನ್ನು ತೊಟ್ಟುಕಳಚಿದ ಹಣ್ಣಿನ ಪತನ, ೧೭-೧೮ ನೆಯ ಶತಮಾನಗಳಲ್ಲಿ ಬಾಳಿದ್ದ ಐಸಾಕ್ ನ್ಯೂಟನ್‌ನ ಕುತೂಹಲವನ್ನು ಉದ್ದೀಪಿಸಿ, ವಿಶ್ವಗುರುತ್ವಾಕರ್ಷಣ ನಿಯಮದ ಮಂಡನೆಗೆ ಕಾರಣವಾಯಿತು. ಹೀಗೆ ಕಾವ್ಯ, ವಿಜ್ಞಾನ ಅಥವಾ ಮಾನವನ ಸೃಜನಶೀಲ ಪ್ರತಿಭೆಯ ಯಾವುದೇ ಉತ್ಸರ್ಜನೆಯ ಮೂಲ ಪ್ರೇರಣೆಯನ್ನು ನಿಸರ್ಗದಲ್ಲಿ ಕಾಣುತ್ತೇವೆ.

ಕುತೂಹಲಭರಿತ ಮನಸ್ಸು ಅದರ ಕಾರಣವನ್ನು ಶೋಧಿಸಲು ತವಕಿಸುವುದು ವಾಡಿಕೆ. ಶೋಧನೆ ರೂಪಿಸುವ ಈ ಪಥಕ್ಕೆ ಅನ್ವೇಷಣೆಯೆಂದು ಹೆಸರು. ಇತಿಹಾಸಪೂರ್ವ ದಿನಗಳಂದು ಅಜ್ಞಾತ ಭಾರತೀಯನೊಬ್ಬ ಸೊನ್ನೆ ಎಂಬ ಮೂಲಭೂತ ಪರಿಕಲ್ಪನೆಯನ್ನು ಸೃಷ್ಟಿಸಿರುವಲ್ಲಿಂದ ತೊಡಗಿ ೧೯೬೯ ರಲ್ಲಿ ಮಾನವ ಚಂದ್ರನ ಮೇಲೆ ಕಾಲಿಟ್ಟು "ಇದು ಒಬ್ಬ ವ್ಯಕ್ತಿಗೆ ಬಲು ಪುಟ್ಟ

ಹೆಜ್ಜೆ. ಆದರೆ ಮನುಕುಲಕೆ, ಹನುಮಂತಲಂಘನ" ಎಂದು ಅಲ್ಲಿಂದಲೇ ಉದ್ಗರಿಸುವಲ್ಲಿಯ ತನಕ ಮತ್ತೂ ಮುಂದಕ್ಕೆ ಸದಾ ಕಾಲ ಮಾನವನ ಸಮಸ್ತ ಅನ್ವೇಷಣೆಗಳಿಗೆ ಪ್ರೇರಣೆ ಒದಗುವುದು ನಿಸರ್ಗವು ಆತನಲ್ಲಿ ಕುದುರಿಸುವ ಕುತೂಹಲದಿಂದ.

ಅನ್ವೇಷಣೆಯ ಪಥವೆಂದೂ ಸುಲಭವಲ್ಲ, ಪೂರ್ವಸಿದ್ಧವೂ ಅಲ್ಲ. ೨೦ನೆಯ ಶತಮಾನದಲ್ಲಿ ಅಸಂಖ್ಯ ವೈಜ್ಞಾನಿಕ ಉಪಜ್ಞೆಗಳನ್ನು (inventions) ಮಾಡಿ ತಂತ್ರವಿದ್ಯೆಗೆ (techonology)ಹೊಸ ಆಯಾಮವಿತ್ತವ ತಾಮಸ್ ಆಲ್ವ ಎಡಿಸನ್. ಈತ ಕೈಗೆತ್ತಿಕೊಂಡ ಒಂದು ವಿನೂತನ ಸಮಸ್ಯೆ ಶುಷ್ಕಕೋಶ ಬ್ಯಾಟರಿಯ (dry cell battery) ನಿರ್ಮಾಣ. ವಿದ್ಯುತ್ತಿನ ಗುಣ ನಿರಂತರ ಚಲನಶೀಲತೆ. ಇದನ್ನು ಬಂಧಿಸಿಟ್ಟು ಬೇಕಾದಾಗ ಬಳಸಿ ಬೆಳಕನ್ನು ಉತ್ಪಾದಿಸುವುದು ಸಾಧ್ಯವೇ? ವಿರುದ್ಧ ಲಕ್ಷಣಗಳ ಸಂಯೋಜನೆ ಸಾಧಿಸುವುದು ಆತನ ಗುರಿ. ಸುಮಾರು ೪೦೦೦ ಪ್ರಯತ್ನಗಳೂ ವಿಫಲವಾದುವು. ಆದರೂ ಆತ ನೀಡಿದ ವಿವರಣೆ ಮಾರ್ಮಿಕವಾಗಿದೆ, "ಇಷ್ಟು ಪ್ರಯತ್ನಗಳು ಸರಿಯಲ್ಲವೆಂದು ತಿಳಿದದ್ದೊಂದು ಲಾಭವಲ್ಲವೇ? ಯಶಸ್ಸಿಗೆ ನಾನೀಗ ಹೆಚ್ಚು ಹತ್ತಿರವಾಗಿರುವೆನೆಂಬ ಭರವಸೆ ಮೂಡಿದೆ." ಯಶಸ್ಸಿಗೆ ಒಳದಾರಿಯಿಲ್ಲ ಎಂಬುದು ಇಂಥ ಅನುಭವಗಳ ಸಾರ.

ಅನ್ವೇಷಕನ ಪಥವೆಂದೂ ಹೂಹಾಸಿನ ಮೇಲಣ ಮೃದುಗಮನವಲ್ಲ, ಬದಲು ಊಹಾತೀತ ಕಂಟಕಗಳ ಎದುರಿನ ಕಠಿಣ ಹೋರಾಟ. ಅತ್ಯುನ್ನತ ಮತ್ತು ದುರ್ಗಮ ಗಿರಿಶಿಖರ ಗೌರೀಶಂಕರವನ್ನು ಮೊತ್ತಮೊದಲು ಏರಿ ವಿಕ್ರಮ ಸಾಧಿಸಿದ ಮುಗ್ಧ ಶೆರ್ಪಾ ತೇನ್‌ಸಿಂಗ್ ನಾರ್ಕೇಯನ್ನು ಪತ್ರಕರ್ತರು, "ಅಷ್ಟೊಂದು ಪ್ರಾಣಾಪಾಯಗಳನ್ನು ಎದುರಿಸಬೇಕಾದೀತೆಂಬ ಅರಿವು ಇದ್ದೂ ನೀವೇಕೆ ಈ ದುಸ್ಸಾಹಸಕ್ಕೆ ದುಮುಕಿದಿರಿ?" ಎಂದು ಪ್ರಶ್ನಿಸಿದಾಗ ಆತನಿತ್ತ ಉತ್ತರ ತೀರ ಸರಳ, ಅಷ್ಟೇ ಧ್ವನಿಪೂರ್ಣ ಕೂಡ, "ಏಕೆಂದರೆ ಅದು ಅಲ್ಲಿ ಇರುವುದರಿಂದ!" ಅದು ಅಲ್ಲಿ ಇದೆ, ನನ್ನೆದುರು ಸವಾಲಾಗಿ ನಿಂತಿದೆ, ನೀನೇರಬಲ್ಲೆಯಾ ನನ್ನೆತ್ತರಕ್ಕೆ ಎಂಬ ಒಗಟಾಗಿ ಸೆಟೆದಿದೆ, ಇದನ್ನು ಸಾಧಿಸುವುದೇ ಸೈ ಎಂಬ ಸ್ಫೂರ್ತಿ, ಕೆಚ್ಚು, ಉತ್ಸಾಹ ಮುಂತಾದವು ಇಲ್ಲಿ ವರ್ತಿಸುವ ಪ್ರಭಾವಗಳು.

ಹೀಗೆ ಮಾನವನಲ್ಲಿ ಕುತೂಹಲವೊಂದು ಸಹಜ ಧರ್ಮ, ಅದನ್ನು ಅನ್ವೇಷಣೆಯಾಗಿ ರೂಪಿಸುವುದು ಪರಧರ್ಮ ಮತ್ತು ಆಗ ಲಭಿಸುವ ಫಲವನ್ನು

ಮನುಕುಲಕ್ಕೆ ಅರ್ಪಿಸಿ ಕೃತಾರ್ಥತೆ ಗಳಿಸುವುದು ಪರಮಧರ್ಮ. ಇದರಿಂದ ನನಗೇನು ಲಾಭ, ನಾನೇಕೆ ಶ್ರಮಿಸ ಬೇಕು ಎಂದುಕೊಂಡು ತನ್ನ ಜಡತ್ವಕ್ಕೆ ಶುಷ್ಕ ತರ್ಕವನ್ನು ಪೋಣಿಸುವ ಶೂನ್ಯವಾದಿಗಳಿಗೇನೆನ್ನೋಣ? ಹಿರಿಯರು ಮತ್ತು ಅನುಭವಿಗಳು ಇಲ್ಲಿ ಜಾಂಬವಂತನ ಪಾತ್ರವನ್ನು ಪ್ರೀತಿಯಿಂದ ನಿರ್ವಹಿಸಬೇಕು.

ಒಂದು ಉದಾಹರಣೆ. ಭರತಖಂಡದ ದಕ್ಷಿಣ ದಂಡೆಯಲ್ಲಿ ಸುಗ್ರೀವಾನುಚರರು ಜಮಾಯಿಸಿದ್ದಾರೆ. ಸೀತಾನ್ವೇಷಣೆ ಅವರ ಉದ್ದೇಶ. ಕಡಲಾಚೆ ಇರಬಹುದಾದ ಲಂಕೆಯಲ್ಲಿ ಆಕೆಯನ್ನು ಬಂಧಿಸಿಡಲಾಗಿದೆ ಎಂಬುದು ಊಹೆ. ಅತ್ತ ಕಡೆಗೆ ನೆಗೆದು, ಅಲ್ಲಿ ಇಳಿದು ತಪಾಸಿಸಿ ತಥ್ಯವರಿತು ಮರಳಬಲ್ಲ ವೀರಪುಂಗವರು ಯಾರು ಎಂಬ ಜಿಜ್ಞಾಸೆ ಅವರೆದುರು ಭೂತಾಕಾರವಾಗಿ ಸೆಟೆದು ನಿಂತಿದೆ. ಒಬ್ಬನ ಹೊರತಾಗಿ ಎಲ್ಲರೂ ತಮ್ಮ ತಮ್ಮ ಸಾಮರ್ಥ್ಯ ಕುರಿತು ವಿವರಣೆ ನೀಡಿದ್ದಾರೆ, ಆದರೆ ಯಾರೂ ಯಶಸ್ಸನ್ನು ಮಾತ್ರ ಆಶ್ವಾಸಿಸಲಾರದವರಾಗಿದ್ದರು. ಆಗ ಆ ತಂಡದಲ್ಲಿದ್ದ ವೃದ್ಧ ಪರಾಕ್ರಮಿ ಜಾಂಬವಂತ ಆ ಒಬ್ಬನೇ ಒಬ್ಬ ಮೌನಿಯನ್ನು ಕುರಿತು, "ಅಯ್ಯಾ! ವಾಯುಪುತ್ರ ಆಂಜನೇಯ! ನಿನ್ನಲ್ಲಿ ಈ ಸಾಮರ್ಥ್ಯ ಸುಪ್ತವಾಗಿದೆ. ಈಗ ರಾಮಕಾರ್ಯ ಅದನ್ನು ಪ್ರಜ್ವಲಿಸುತ್ತಿದೆ. ಏಳು, ಹಾರು, ಮಾತೆಯನ್ನು ಪತ್ತೆ ಹಚ್ಚಿ ಮರಳು" ಎಂದು ಹುರಿದುಂಬಿಸುತ್ತಾನೆ. ಮಿಕ್ಕುದು ಎಲ್ಲರಿಗೂ ತಿಳಿದಿರುವ ಸಂಗತಿ. ನಿಜ, ಸಿದ್ಧ ಮನಸ್ಸಿಗೆ ಮಾತ್ರ ಅವಕಾಶ ಒಲಿಯುತ್ತದೆ.

ಬದುಕು ಬಲು ಸುಂದರವಾದದ್ದು. ಇಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಅರಿಯದ ನೆಲದಲ್ಲಿ, ತಿಳಿದಿರದ ಜಾಡಿನಲ್ಲಿ, ಗೊತ್ತಿರದ ಗುರಿಯೆಡೆಗೆ ಸತತ ಪರಿಕ್ರಮಣಶೀಲನಾಗಿರಬೇಕಾದದ್ದು ಸೃಷ್ಟಿನಿಯಮ. ಇಂಥ ನಿರಂತರ ಪರಿವ್ರಜನದಲ್ಲಿ ಆತ ಪರಂಪರೆಯಿಂದ ತನಗೆ ಬಳುವಳಿಯಾಗಿ ಬಂದ ಜೀವನ ಮೌಲ್ಯಗಳನ್ನು ವರ್ತಮಾನದ ಚೌಕಟ್ಟಿನಲ್ಲಿ ಯುಕ್ತವಾಗಿ ವ್ಯಾಖ್ಯಾನಿಸುತ್ತ ಸಮಷ್ಟಿಹಿತಕ್ಕೆ ಸದಾ ಬದ್ಧನಾಗಿ ಮುನ್ನಡೆಯುತ್ತಿರಬೇಕಾದದ್ದು ಪೂರ್ವ ಸೂರಿಗಳಿಂದ ತಿಳಿದು ಬಂದಿರುವ ಅಲಿಖಿತ ಕ್ರಮ. ಹೀಗೆ ಮುನ್ನಡೆವಾತ ಜೀವನಮುಖಿಯಾಗಿದ್ದು ಉಲ್ಲಾಸ ಬೀರುತ್ತಿರುವನು.

***

ಜಾಗತೀಕರಣದ ಅಲೆ ಹಾಗೂ ಭಾರತೀಯ ಭಾಷೆಗಳು

-ಡಾ॥ ಅರ್ಜುನಪುರಿ ಅಪ್ಪಾಜಿಗೌಡ

ಸಂಸ್ಕೃತಿಯ ಒಂದು ಅಂಗವಾದ ಭಾಷೆಯನ್ನು ಜಾಗತೀಕರಣವು ಬಳಕೆಯ ವಸ್ತುವನ್ನಾಗಿ ಮಾಡಿದೆ. ಬಂಡವಾಳ ಹಾಕಿ ಲಾಭ ಪಡೆಯುವ ಉತ್ಪಾದನಾ ವಸ್ತುವಿನಂತೆ ಭಾಷೆಯನ್ನೂ ದುಡಿಸಿಕೊಳ್ಳಲು ಸಂಚು ನಡೆದಿದೆ. ಉತ್ಪಾದಿತವಾದ ಹೊಸ ಸರಕುಗಳ ಅಬ್ಬರದ ಪ್ರಚುರದಿಂದಾಗಿ ಅನಾವಶ್ಯಕ ಎಂದು ಗೊತ್ತಾದರೂ ತಾವು ಎಲ್ಲಿ ಅನಾಗರಿಕ ಎಂದು ಜನ ತೀರ್ಮಾನಿಸುತ್ತಾರೆಯೋ ಎಂದು ದಿಗಿಲುಪಟ್ಟು ಸರಕು ಅಗತ್ಯ ಇರಲಿ ಇಲ್ಲದಿರಲಿ ಖರೀದಿಸುವ ಪ್ರೇರಣೆಯನ್ನು, ಸರಕು ಸಂಸ್ಕೃತಿ ಮಾಡುತ್ತಿದೆ.

ಇತಿಹಾಸವನ್ನು ನೋಡಿದಾಗ ಈಸ್ಟ್ ಇಂಡಿಯಾ ಕಂಪನಿ ವ್ಯಾಪಾರದ ನೆಪದಲ್ಲಿ ಭಾರತೀಯರ ಸ್ವಾತಂತ್ರ್ಯಹರಣ ಮಾಡಿ ಗುಲಾಮ ಗಿರಿಯಲ್ಲಿ ಇಟ್ಟಿತ್ತು! ೨೦೦೬ರಿಂದ ವಿಶ್ವದ ಸುಮಾರು ೩೫೦೦ ಕಂಪನಿಗಳು ತಮ್ಮ ಸರಕುಗಳನ್ನು ಭಾರತದಾದ್ಯಂತ ಮಾರಾಟ ಮಾಡುತ್ತಿವೆ! ಭಾರತದ ಗೃಹ ಕೈಗಾರಿಕೆಗಳ ಉತ್ಪನ್ನ ಮತ್ತು ಜನಸಾಮಾನ್ಯರ ಆರ್ಥಿಕ ಸ್ಥಿತಿ ಇತ್ಯಾದಿ ಸಮಸ್ಯೆಗಳಿಂದ ಗಾಂಧೀಜಿಯವರ ರಾಮರಾಜ್ಯದ ಸಾಧ್ಯತೆ ಏನಾದೀತು ಎಂಬ ಬಗ್ಗೆ ಚಿಂತಿಸಬೇಕಾದ ಅಗತ್ಯವಿದೆ ಅಲ್ಲವೇ?

ಮೂಲತ: ಭಾರತ ವ್ಯವಸಾಯ ಪ್ರಧಾನ ದೇಶ. ನೂರಕ್ಕೆ ೬೫ ಜನ ರೈತರಾಗಿದ್ದು ಬದುಕಲು ಭೂಮಿಯನ್ನೇ ನಂಬಿರುವವರು. ಜನಸಂಖ್ಯೆ ೧೦೬ ಕೋಟಿ ಮೀರಿದೆ. ಕೈಗಾರಿಕೀಕರಣದಿಂದ ಹಿಡುವಳಿಯ ಭೂಮಿ ಕಿರಿದಾಗುತ್ತಿದೆ. 'ಕೆಟ್ಟು ಪಟ್ಟಣ ಸೇರು ಎಂಬಂತೆ' ಹಳ್ಳಿಯ ಜನ ನಗರದತ್ತ ವಲಸೆ ಹೋಗುತ್ತಿದ್ದಾರೆ.

ಜಾಗತೀಕರಣ ಭಾರತದ ರೈತರಿಗೆ ಶಾಪವಾಗುತ್ತಿದೆ. ಗ್ರಾಮೀಣ ಭಾರತ ನಿರ್ನಾಮವಾಗಿ, ದಾಸ್ಯದತ್ತ ದಾಪುಗಾಲು ಹಾಕುತ್ತಿದೆ. ಈ ಅಂಶ ಭಾಷೆಯ ಮೇಲೆ ಮಹತ್ವದ ಪರಿಣಾಮ ಬೀರುತ್ತಿದೆ.

ಡನ್‌ಲಪ್ ಟೈರನ್ನು ಅಮೇರಿಕಾದ ಒಂದು ಕಂಪನಿ ಭಾರತಕ್ಕೆ ಪರಿಚಯಿಸಿತು. ಟೈರುಗಳ ಮಾರಾಟ ನಿರೀಕ್ಷಿತವಾಗಿ ಹೆಚ್ಚಾಗಲಿಲ್ಲ. ಭಾರತದಲ್ಲಿ ಲಾರಿ, ಬಸ್ಸು, ಕಾರು ಉಳ್ಳವರು ಎಷ್ಟು ಜನರಿದ್ದಾರು? ಎಷ್ಟು ಟೈರು ಖರೀದಿಸಿಯಾರು? ಅಮೇರಿಕಾದ ಡನ್‌ಲಪ್ ಟೈರು ಕಾರ್ಖಾನೆಯಿಂದ ಮಾರುಕಟ್ಟೆ ತಜ್ಞ ಅಧಿಕಾರಿಯೊಬ್ಬ ಪರಶೀಲನೆಗಾಗಿ ಭಾರತಕ್ಕೆ ಬಂದು ಒಂದೆರಡು ತಿಂಗಳು ವಿವಿಧ ರಾಜ್ಯಗಳಲ್ಲಿ ಓಡಾಡಿದ. ರೈತರು ದಿನನಿತ್ಯ ಬಳಸುವ ಎತ್ತಿನ ಗಾಡಿ ಅವನ ಕಣ್ಣಿಗೆ ಬಿತ್ತು. ಒಂದು ಚಕ್ಕಡಿಯನ್ನು ಅಮೇರಿಕಾಕ್ಕೆ ಅನಾಮತ್ತಾಗಿ ವಿಮಾನದಲ್ಲಿ ತೆಗೆದುಕೊಂಡು ಹೋದ. ಗಾಡಿಯನ್ನು ತಜ್ಞ ಸಹೋದ್ಯೋಗಿಗಳಿಗೆ ತೋರಿಸಿ ಚರ್ಚಿಸಿದ. ಭಾರತದಲ್ಲಿ ಸಾಧಾರಣ ರೈತರ ಬಳಿಯೂ ಇಂತಹ

ಚಕ್ಕಡಿಗಳಿವೆ. ಶೇ.೭೫ ಭಾಗ ರೈತರಿದ್ದು, ಮಧ್ಯಮ ಮತ್ತು ದೊಡ್ಡ ಹಿಡುವಳಿದಾರರ ಬಳಿಯಲ್ಲಿ ಈ ಗಾಡಿ ಇರಲೇಬೇಕು. ಈ ಚಕ್ಕಡಿಗೆ ನಮ್ಮ ಡನ್‌ಲಪ್ ಟೈರು ಅಳವಡಿಸಿದರೆ ವ್ಯಾಪಾರ ಅದ್ಭುತವಾಗಿ ಹೆಚ್ಚುವರಿಯಾಗುತ್ತದೆ ಎಂಬುದು ನನ್ನ ಗಟ್ಟಿಯಾದ ತೀರ್ಮಾನ ಎಂದ. ಟೈರುಗಾಡಿ ಈ ರೀತಿಯಲ್ಲಿ ಹಳ್ಳಿಗಳಿಗೆ ಆಗಮಿಸಿತು.

ಮರದ ಚಕ್ರದ ಬದಲು ಡನ್‌ಲಪ್ ಟೈರು ಹಾಕಿದ ಟೈರುಗಾಡಿ ಚಲಾವಣೆಗೆ ಬಂತು. ಚಕ್ಕಡಿಯ ಜಾಗದಲ್ಲಿ ಟೈರುಗಾಡಿ ರೈತರ ಮನಸ್ಸನ್ನು ಆಕರ್ಷಿಸಿತು. ಭಾರತದ ಕೋಟಿಕೋಟಿ ರೈತರು ಡನ್‌ಲಪ್ ಟೈರು, ಗಾಡಿಗಳನ್ನು ಖರೀದಿಸಿದರು. ಮರದ ಗಾಡಿ ಮಾಯವಾಯಿತು! ಹಲ್ಲರ್ ಫ್ಲೋರ್ ಮಿಲ್ಲಿನಿಂದ ರಾಗಿ ಕಲ್ಲು, ಮಿಕ್ಸರ್ ಗ್ರೈಂಡರ್‌ನಿಂದ ರುಬ್ಬುವ ಒರಳುಕಲ್ಲು, ಆರ್.ಸಿ.ಸಿ. ಮನೆಗಳಿಂದ ಆಗುಂತಕರು ವಿಶ್ರಮಿಸುತ್ತಿದ್ದ ಜಗಲಿಗಳು ಅದೃಶ್ಯವಾದ ಕರಾಳಕಥೆ ಜೊತೆಗೆ ಬೀಸುವ ಪದ, ಗಾಡಿಯ ಪದ ಮುಂತಾದ ಜನಪದ ಸಾಹಿತ್ಯ ಇತ್ತೀಚೆಗೆ ವೃತ್ತಿ ಬದಲಾವಣೆಯಿಂದ ಮಾಯವಾದ ಕಥೆ ಎಲ್ಲರಿಗೂ ತಿಳಿದೇ ಇದೆ.

ಜಗತ್ತಿನ ಯಾವುದೇ ಭಾಷೆ ನೋಡಿದರೂ ಅದಕ್ಕೆ ಎರಡು ನೆಲೆಗಳಿರುತ್ತವೆ. ವ್ಯಾವಹಾರಿಕ ಮತ್ತು ಲಿಖಿತ ನೆಲೆ ಎಂಬುದಾಗಿ. ವ್ಯಾವಹಾರಿಕ ನೆಲೆಯಲ್ಲಿ ಭಾಷೆ ನಿರಂತರವಾಗಿ ಚಲನಾತ್ಮಕವಾಗಿದ್ದು "ಸ್ವೀಕಾರ"ದ ಲಕ್ಷಣ ಕಂಡುಬರುತ್ತದೆ. ನಾವು ಹೊಸದಾಗಿ ಬಳಸುವ ಸರಕು ಆಧುನಿಕವಾದ ಹೊಸ ಶಬ್ದದಿಂದ ಕೂಡಿದ್ದು, ಆ ಶಬ್ದ ನೂತನವಾಗಿ ಭಾಷೆಯ ಶಬ್ದ ಭಂಡಾರಕ್ಕೆ ಸೇರ್ಪಡೆಯಾಗುತ್ತದೆ. ಆಡುಮಾತಿಗೆ ಬಂದಾಗ ಶ್ರೀಸಾಮಾನ್ಯರು ಇದ್ಯಾವ ಸೀಮೆ ಭಾಷೆ, ಇದೆಂಥ ಶಬ್ದ. ಎಂಬ ಗೊಂದಲದಲ್ಲಿ ಗೊಣಗಾಡುವುದು ಸಾಮಾನ್ಯ ಅನುಭವ.

ಪಟ್ಟಣ ಪ್ರದೇಶದ ಮಧ್ಯಮ ವರ್ಗದ ಕುಟುಂಬದಲ್ಲಿ ಕಂಡುಬರುವ ಒಂದು ಕನ್ನಡ ವಾಕ್ಯವನ್ನು ಗಮನಿಸಿ. "ಫ್ರಿಡ್ಜ್‌ನಲ್ಲಿರುವ ಸ್ನ್ಯಾಕ್ಸ್(Snacks) ತೆಗೆದು, ಓವಲ್‌ನಲ್ಲಿ ಬಿಸಿಮಾಡಿ, ಹಾಟ್ ಬಾಕ್ಸ್‌ನಲ್ಲಿ ಇಟ್ಟು ಹೋಗು, ಈವ್ನಿಂಗ್ ಲಂಚ್‌ಗಾಗತ್ತೆ" ಈ ವಾಕ್ಯದಲ್ಲಿ ಸಂಸ್ಕೃತಿಯ ಮೇಲೆ ದಾಳಿ ನಡೆದಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಫ್ರಿಡ್ಜ್, ಓವಲ್, ಹಾಟ್‌ಬಾಕ್ಸ್ ಗೊತ್ತಿಲ್ಲದ ಸ್ನ್ಯಾಕ್ಸ್, ಈವ್ನಿಂಗ್‌ಲಂಚ್ ಕಲ್ಪನೆ ಇಲ್ಲದ ಗ್ರಾಮೀಣ ಜನ ಈ ವಾಕ್ಯ ಕೇಳಿ ಕಕ್ಕಾಬಿಕ್ಕಿಯಾಗುವುದಿಲ್ಲವೆ? ಇದು ಕನ್ನಡದ್ದೇ ವಾಕ್ಯ ಎಂದರೆ ಏನು ಗತಿ! ಜಾಗತೀಕರಣದ ಫಲವಾಗಿ ವೈವಿಧ್ಯಮಯವಾದ, ಭೋಗದ, ಅಗತ್ಯವೇ ಅಲ್ಲದ ಅನೇಕಾರು ವಸ್ತುಗಳು ನಮ್ಮ ಸಾಮಾಜಿಕ ಸಂರಚನೆಯ ಮೇಲೆ, ಭಾಷೆಯ ಮೇಲ ಆಕ್ರಮಣ ಮಾಡುತ್ತಿದ್ದು ಭಾಷೆಗೆ ಇರುವ ಸಂವಹನದ ಸಾರ್ವತ್ರಿಕ ಆಯಾಮವನ್ನು ನಾಶಮಾಡುತ್ತಿದೆ. ಹಳೇ ಮೈಸೂರು, ಧಾರವಾಡ, ದಕ್ಷಿಣ ಕನ್ನಡದ ಪ್ರಾದೇಶಿಕ ಭಾಷಾ ಭೇದದಂತೆ ಗ್ರಾಮೀಣ ಕನ್ನಡ, ಪಟ್ಟಣದ ಕನ್ನಡ ಎಂದು ಮುಂದೆ ಒಂದು ದಿನ ಪ್ರತ್ಯೇಕ ಕನ್ನಡ ಭಾಷೆಗಳಾಗಿ ಕವಲೊಡೆದರೆ ಆಶ್ಚರ್ಯಪಡಬೇಕಾಗಿಲ್ಲ.

ವ್ಯಷ್ಟಿ ಸಮಷ್ಟಿಗಳ ವಿಚಾರದಲ್ಲಿ ನೋಡಿದಾಗ ಜಾಗತೀಕರಣದ ಧಾಳಿಯಾಗುತ್ತಿರುವುದು ವ್ಯಷ್ಟಿಯ ನೆಪದಲ್ಲಿ ಸಮಷ್ಟಿಯ ಮೇಲೆ. ವ್ಯಷ್ಟಿ ಕೆಟ್ಟರೆ ಸರಿಪಡಿಸುವುದು ಸುಲಭ, ಅದರಿಂದ ಸಮಾಜಕ್ಕೆ ವಿಪರೀತವಾದ ಹಾನಿಯೇನೂ ಇಲ್ಲ. ಸಮಷ್ಟಿ ಕೆಟ್ಟರೆ ಸಂಪೂರ್ಣ ಸಮಾಜ, ದೇಶ, ಸಾವಿರಾರು ವರ್ಷಗಳ ಪರಂಪರೆಯ ಸಾರದೊಡನೆ ಅಭಿವೃದ್ಧಿಗೊಂಡ ಪುಷ್ಟಿದಾಯಕವಾದ ಸಂಸ್ಕೃತಿಯೇ ನಾಮಾವಶೇಷವಾಗುತ್ತದೆ.

ಒಂದು ಕಾಗದದ ಬದಿಯಲ್ಲಿ ಭಾರತದ ಭೂಪಟ, ಅದರ ಮತ್ತೊಂದು ಬದಿಯಲ್ಲಿ ರಾಷ್ಟ್ರಪಿತ ಗಾಂಧೀಜಿಯವರ ಚಿತ್ರವಿದೆ ಎಂದುಕೊಳ್ಳಿ. ಕಾಗದವನ್ನು ಚೂರು ಚೂರಾಗಿ ಹರಿದು ಬಿಸಾಕಿದ್ದಾರೆ. ಆ ಹಾಳೆಯನ್ನು ಮೊದಲಿನಂತೆ ಜೋಡಿಸುವುದು ಹೇಗೆ ಎಂಬುದು ಸಮಸ್ಯೆ. ಸಮಷ್ಟಿಯ ಸಂಕೇತವಾದ ಭಾರತದ ಭೂಪಟವನ್ನು ಸೇರಿಸುವುದು ಕಡು ಕಷ್ಟ ; ವ್ಯಷ್ಟಿಯ ಸಂಕೇತವಾದ ಗಾಂಧೀಜಿಯವರ ಚಿತ್ರ ಜೋಡಿಸುವುದು ಸುಲಭ. ಹರಿದು ತುಂಡು ತುಂಡಾಗಿದ್ದ ಗಾಂಧೀಜಿಯವರ ಚಿತ್ರದ ತುಣುಕುಗಳನ್ನು ತಲೆ, ಕೈಕಾಲು ಶರೀರದ ಭಾಗಗಳನ್ನು ಕ್ರಮಬದ್ಧವಾಗಿ ಜೋಡಿಸಿದಾಗ ಗಾಂಧೀಜಿಯವರ ಚಿತ್ರ ಮೂಡುತ್ತದೆ. ಅದೇ ಕಾಗದದ ಹಿಂಭಾಗದಲ್ಲಿದ್ದ ಭಾರತದ ಭೂಪಟ ತನಗೆ ತಾನೇ ಸರಿಹೋಗುತ್ತದೆ. ಆದರೆ ಹರಿದು ಛಿದ್ರವಾಗಿರುವ ವ್ಯಷ್ಟಿಯನ್ನು ಪರಿಣಾಮಕಾರಿಯಾಗಿ, ಸಮರ್ಥವಾಗಿ ನೇರ್ಪಡಿಸುವ ದ್ರಷ್ಟಾರರು ಯಾರಿದ್ದಾರೆ? ಜಾಗತೀಕರಣದ ಪ್ರಭಾವ ಚಿತ್ರ ಚೂರು ಚೂರಾದಂತೆ ಭಾರತೀಯ ಸಂಸ್ಕೃತಿಯನ್ನು ಹಳಿ ತಪ್ಪಿಸಿ ವ್ಯಷ್ಟಿಗಳನ್ನು ದಾಟಿ ಸಮಷ್ಟಿಯ ಮೇಲೆ ದಾಳಿ ಪ್ರಾರಂಭಿಸಿಬಿಟ್ಟಿದೆ.

ಸಮಾಜ ಸಂಸ್ಕೃತಿಯಲ್ಲಿ ಭೌತ ಮತ್ತು ಅಭೌತಿಕ ಸಂಸ್ಕೃತಿಗಳಿವೆ, ಭೌತ ಸಂಸ್ಕೃತಿ ಪರಿವರ್ತನಾಶೀಲವಾದದ್ದು, ಗಡಿಯಾರದ ನಿಮಿಷದ ಮುಳ್ಳಿನಂತೆ ವೇಗವು ಹೆಚ್ಚು. ಅಭೌತ ಸಂಸ್ಕೃತಿಯ ಪರಿವರ್ತನೆ ತುಂಬಾ ಮಂದಗತಿಯಲ್ಲಿ ಗಡಿಯಾರದ ಚಿಕ್ಕ ಮುಳ್ಳಿನಂತೆ ಭೌತ ಸಂಸ್ಕೃತಿಯನ್ನೇ ಹಿಂಬಾಲಿಸುತ್ತದೆ. ಭೌತ ಸಂಸ್ಕೃತಿ 'ಸರಕುಸಂಸ್ಕೃತಿ' ಆಗಿದೆ ಎಂಬುದನ್ನು ಗಮನಿಸಬೇಕು.

ಆಧುನಿಕ ಸರಕುಗಳನ್ನು ಖರೀದಿಸುವ ಮಂದಿ ಹೊಸ ಹೆಸರಿನ ಆ ಶಬ್ದದ ಜೊತೆಯಲ್ಲಿಯೇ ವಸ್ತುವನ್ನು ತೆಗೆದುಕೊಳ್ಳುತ್ತಾರೆ, ಬಳಸುತ್ತಾರೆ. ಗೊತ್ತಾಗದಂತೆಯೇ 'ನಮ್ಮತನದ' ಮೇಲೆ ದಾಳಿ ಪ್ರಾರಂಭವಾಗುತ್ತದೆ. ಪಾರಂಪರಿಕ ಭಾಷೆಯ ಸೊಗಡು ನಾಶವಾಗುತ್ತಾ ಸರಕುಸಂಸ್ಕೃತಿ ವಿಜೃಂಭಿಸುತ್ತದೆ. ನಗರದಲ್ಲಿ ಮತ್ತು ಹಳ್ಳಿಗಳಲ್ಲಿ ವಾಸ ಮಾಡುವ ಮಧ್ಯಮವರ್ಗದ ಜನರಲ್ಲಿ ಈ ಸಂವಹನ ಕ್ರಿಯೆ ಎದ್ದು ಕಾಣುತ್ತದೆ.

ಸರಕುಗಳ ಜೊತೆ ದೇಶಿಯ ಶಬ್ದಗಳನ್ನು ಟಂಕಿಸುವ ಕ್ರಿಯೆ ನಿಂತೇ ಹೋಗಿದೆ. ಭಾಷೆಗೆ ಸ್ವೀಕಾರ ಗುಣವಿದೆ ಎಂಬ ಪ್ರತಿಪಾದನೆ ಹಿನ್ನೆಲೆಯಲ್ಲಿ ಹೊಸ ಸರಕಿನ ಜೊತೆ ಅನ್ಯದೇಶೀಯ ಶಬ್ದಗಳು ಸೇರ್ಪಡೆಗೊಳ್ಳುತ್ತಿವೆ,

'ಭಾಷಾಭಿಮಾನ'ದ ವಿಚಾರ ಎತ್ತಿದರೆ ವಿಡಂಬನೆಗೆ ಗುರಿಯಾಗುತ್ತಿದ್ದೇವೆ. ರೇಡಿಯೋಗೆ ಆಕಾಶವಾಣಿ, ಸ್ಲಂಗೆ ಕೊಳಗೇರಿ, ಸ್ಕೂಲ್‌ಗೆ ಶಾಲೆ, ಕಲ್ಚರ್‌ಗೆ ಸಂಸ್ಕೃತಿ ಮುಂತಾದ ಶಬ್ದಗಳನ್ನು ಉಚ್ಚರಿಸಿದೊಡನೆ ಅರ್ಥಸ್ಫುರಣೆಯಾಗುತ್ತದೆ. ಶಬ್ದಾಭಿವ್ಯಕ್ತಿಯಲ್ಲಿಯೇ ಪಾರದರ್ಶಕತೆ ಕಂಡುಬರುತ್ತದೆ. ಆದರೆ ಈಗ ಖರೀದಿಸುವ ಸರಕುಗಳನ್ನು ದೇಶಿಯ ನೆಲೆಯಲ್ಲಿ ಗುರುತಿಸಲು ಸಾಧ್ಯವಾಗದೆ, ಭಾಷಾ ಸಂಸ್ಕೃತಿ ಸರ್ವನಾಶದತ್ತ ದಾಪುಗಾಲು ಹಾಕುತ್ತಿದೆ. ಭಾಷೆ ಮೂಲ ಸ್ವರೂಪವನ್ನು ಕಳೆದುಕೊಳ್ಳುವಲ್ಲಿ ನಾವುಗಳೆಲ್ಲಾ ಭಾಗಿಯಾಗುತ್ತಿದ್ದೇವೆ.

ಸರಕಿನ ಶಬ್ದ ಹೇಳಿದೊಡನೆ, ಅದರ ಬಳಕೆ, ಸ್ವಭಾವ, ಗುಣಲಕ್ಷಣ, ಕ್ರಿಯೆ, ಪ್ರಯೋಜನ ಮುಂತಾದ ವಿಚಾರಗಳೆಲ್ಲಾ ಧ್ವನಿತವಾಗಬೇಕು. ಉದಾಹರಣೆಗೆ ನೇಗಿಲು, ಒನಕೆ, ರಾಗಿಕಲ್ಲು ಮುಂತಾದ ಶಬ್ದಗಳು. ಪರಂಗಿಯವನ ಹತ್ತಿರ ಸುಣ್ಣ ಕೇಳಿದಂತೆ ಎಂಬ ಮಾತು ಚಲಾವಣೆಯಲ್ಲಿದೆ. ಸುಣ್ಣಕ್ಕೆ ಕ್ಯಾಲ್ಸಿಯಂ ಎನ್ನಲು ಸಾಧ್ಯವಿಲ್ಲ. ಊಟದ ನಂತರ ತಾಂಬೂಲ ಹಾಕುವುದು ವೀಳ್ಯದ ಎಲೆಗೆ ಸುಣ್ಣ ಸವರಿಕೊಳ್ಳುವುದು ಭಾರತದಲ್ಲಿ ಮಾತ್ರ ಇರುವ ಪುರಾತನವಾದ ಪದ್ಧತಿ. ಈ ಸುಣ್ಣಕ್ಕೆ ಇಂಗ್ಲೀಷಿನ ಶಬ್ದ ಹುಡುಕಲು ಸಾಧ್ಯವೇ ಇಲ್ಲ.

ಭಾರತದ ರಾಜಕಾರಣಿಗಳು ಜಾಗತೀಕರಣವನ್ನು ಸ್ವೀಕಾರ ಮಾಡಿದ್ದಾರೆ. ಜನಸಾಮಾನ್ಯರು ಒಪ್ಪಲಿ ಬಿಡಲಿ ಜಾರಿಗೆ ತಂದು ಅಭಿವೃದ್ಧಿಯ ನೆಪದಲ್ಲಿ ತಲೆಯ ಮೇಲೆ ಭಾರ ಹೇರಿದ್ದಾರೆ. ಸಂಸ್ಕೃತಿಯ ಮೇಲೆ ದಾಳಿ ಪ್ರಾರಂಭ ಮಾಡಲು ನಾಂದಿ ಹಾಡಿದ್ದಾರೆ. ಈ ದಾಳಿಗೆ ಕನ್ನಡ ಭಾಷೆಯು ಹೊರತಾಗಿಲ್ಲ.

ಬೆಟ್ಟದ ಮೇಲಿದ್ದ ಬಂಡೆಯನ್ನು ಕೆಳಗೆ ನೂಕಿದ್ದಾರೆ. ಕೆಳಗಿನ ಜನರ ಒಪ್ಪಿಗೆ ಪಡೆದಿಲ್ಲ. ಬಂಡೆ ಬೀಳುತ್ತದೆ, ದೂರ ಓಡಿ ಹೋಗಿ ಎಂಬ ಸೂಚನೆಯನ್ನು ನೀಡಿಲ್ಲ! ಮೇಲಿನಿಂದ ಕೆಳಗೆ ಉರುಳಿ ಬರುತ್ತಿರುವ ಬಂಡೆಯನ್ನು ಬೆಟ್ಟದ ನಡುವೆ ಹಿಡಿಯಲು ಸಾಧ್ಯವಿಲ್ಲ. ಜನರಿಗೆ ಅಪಾಯವಾಗದಂತೆ ಎಚ್ಚರಿಕೆಯನ್ನಾದರೂ ನೀಡಲೇಬೇಕಾಗಿದೆ. ಸರಕುಗಳು ಬರಲಿ, ಅಗತ್ಯವಿರುವುದನ್ನು ಖರೀದಿಸಿ ನಮ್ಮ ಹೆಸರಿಟ್ಟು ನಮ್ಮದನ್ನಾಗಿ ಮಾಡಿಕೊಳ್ಳಿ ಎಂದಷ್ಟೇ ಹೇಳಬಹುದು. ವಿದೇಶಕ್ಕೆ ಓದಲು ಹೋದ ಮಗ 'ಪರಂಗಿ ಹೆಣ್ಣಿ'ನೊಡನೆ ಬಂದಿದ್ದಾನೆ. ಅವಳನ್ನು ಸೊಸೆಯಾಗಿ ಸ್ವೀಕರಿಸದೇ ಗತ್ಯಂತರವಿಲ್ಲ. ತುಂಡು ಲಂಗ, ತೋಳಿಲ್ಲದ ರವಿಕೆ, ಕತ್ತರಿಸಿದ ಕೂದಲು ಬೇಡ ತಾಯಿ ಎಂದು ತಿಳುವಳಿಕೆ ಹೇಳಿ ನಮ್ಮ ಪರಂಪರೆಗೆ ಒಗ್ಗುವ ಸೀರೆ ನೀಡಿ, ರವಿಕೆ ಕೊಟ್ಟು, ಹಣೆಗೆ ಕುಂಕುಮವಿಟ್ಟು ಸೊಸೆಯನ್ನಾಗಿ ಸ್ವೀಕರಿಸುವಂತೆ ಜಾಗತೀಕರಣವನ್ನು ಭಾರತೀಯತೆ ಮಾಡಿಕೊಳ್ಳುವ ಬುದ್ಧಿವಂತಿಕೆಯನ್ನು ನಾವೆಲ್ಲರೂ ಮೆರೆಯಬೇಕಾಗಿದೆ. ಈ ಬಗ್ಗೆ ಹಿರಿಯರಾದ ಕನ್ನಡ ಭಾಷಾ ತಜ್ಞರು ಚಿಂತಿಸಬೇಕಾಗಿದೆ.

***

ಸಮಾನ ಶಾಲಾ ಶಿಕ್ಷಣ ವ್ಯವಸ್ಥೆ ಇನ್ನೂ ಬಹು ದೂರ

–ಶಾರದಾ ಗೋಪಾಲ

ಶಿಕ್ಷಣವು ಸಮಾನತೆಯ ಕಲ್ಪನೆಯನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತಬೇಕು. ಆದರೆ ಶಿಕ್ಷಣವೇ ಅಸಮಾನತೆಯ ಬೀಜವನ್ನು ಬಿತ್ತುತ್ತ ನಡೆದರೆ? ಸಮಾನತೆಯನ್ನೆಂದಾದರೂ ಬೆಳೆಯಲಿಕ್ಕಾದೀತೆ? ಇದೇ ಫೆ. ೨೮ರಂದು ಲೋಕಸಭೆಯಲ್ಲಿ ಶಿಕ್ಷಣ ಮಸೂದೆಯ ಮಂಡನೆಯಾಗಿದೆ.

"ಆಹಾರ ಮತ್ತು ವಸತಿಯಂತೆಯೇ ಶಿಕ್ಷಣವೂ ಕೂಡ ನಮ್ಮ ದೇಶದ ಪ್ರಜೆಗಳ ಜನ್ಮಸಿದ್ಧ ಹಕ್ಕು" ಎಂದು ನಮ್ಮ ಸಂವಿಧಾನವು ಘೋಷಿಸಿದೆ. ಪ್ರಜೆಗಳಿಗೆ ಅವರ ಹಕ್ಕನ್ನು ಕೊಡಮಾಡುವುದು ಸರಕಾರದ ಆದ್ಯ ಜವಾಬ್ದಾರಿ ಎಂಬುದನ್ನು ಮಾತ್ರ ನಮ್ಮ ಸರಕಾರಗಳು ಒಪ್ಪಿಕೊಂಡಂತಿಲ್ಲ. ಐವತ್ತೆಂಟು ವರ್ಷಗಳು ಕಳೆದರೂ ಅನಕ್ಷರತೆ ತಾಂಡವವಾಡುತ್ತಿರುವುದೇ ಅದಕ್ಕೆ ಸಾಕ್ಷಿ.

ಸ್ವಾತಂತ್ರ್ಯೋತ್ತರ ದಿನಗಳಲ್ಲಿ ದೇಶದ ಮುಂದಿನ ನಾಗರಿಕರಾದ ಮಕ್ಕಳಿಗೆ ಶಿಕ್ಷಣವನ್ನು ಕೊಡಮಾಡುವ ದಿಶೆಯಲ್ಲಿ ಸರಕಾರವು ಮೊಟ್ಟ ಮೊದಲು ಕಾರ್ಯನಿರತವಾಗಬೇಕಾಗಿತ್ತು. ಆದರೆ ಪಂಚವಾರ್ಷಿಕ ಯೋಜನೆಗಳಲ್ಲಿ, ವಾರ್ಷಿಕ ಬಜೆಟ್ಟಿನಲ್ಲಿ, ಶಿಕ್ಷಣಕ್ಕಾಗಿ ಸಾಕಷ್ಟು ಹಣವನ್ನು ಮೀಸಲಿರಿಸದ ಕಾರಣ ಹಳ್ಳಿಗಳನ್ನು, ಗುಡ್ಡಗಾಡುಗಳನ್ನು ಮುಟ್ಟುವಷ್ಟು ಶಿಕ್ಷಣ ವ್ಯವಸ್ಥೆ ಬಲಗೊಳ್ಳಲೇ ಇಲ್ಲ. ವಿದ್ಯಾರ್ಥಿಯ ಮೇಲೆ ಸರಕಾರವು ವೆಚ್ಚ ಮಾಡುವ ತಲಾವಾರು ಕಡಿಮೆಯಿದ್ದುದರಿಂದ ತಂದೆ ತಾಯಿಗಳೇ ಶಿಕ್ಷಣದ ಹೊರೆ ಹೊರಬೇಕಾಯಿತು. ಹೀಗಾಗಿ ನಮ್ಮ ದೇಶದಲ್ಲಿ ಹಣವುಳ್ಳವರಿಗೆ ಮಾತ್ರ ಶಿಕ್ಷಣ ಎಂಬ ಕಾನೂನು ಎಂದಿನಿಂದಲೂ ಅಲಿಖಿತವಾಗಿ ಜಾರಿಯಲ್ಲಿದ್ದೇ ಇದೆ.

ಆ ದಿನಗಳಲ್ಲಿ ಬೇರೆಬೇರೆ ಸಂಸ್ಥೆ, ಸಂಘಟನೆಗಳು ಶಾಲೆ ಆರಂಭಿಸಲು ಮುಂದಾದವು. ಧಾರ್ಮಿಕ ಸಂಸ್ಥೆಗಳೂ ಕೂಡ ಶಿಕ್ಷಣ ಕ್ಷೇತ್ರದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡವು. ಮಕ್ಕಳಿಗೆ ಶಿಕ್ಷಣ ದೊರಕಿಸುವ ಉದ್ದೇಶದಿಂದ ಸ್ಥಾಪಿತಗೊಂಡ ಸಂಸ್ಥೆಗಳು ಇಂದು ಗಟ್ಟಿಮುಟ್ಟಾಗಿ ಬೆಳೆದು ನಿಂತಿವೆ. ಶಿಕ್ಷಣ ಶುಲ್ಕವೇ ಇವುಗಳ ಮೂಲ ಆದಾಯ, ಸಂಸ್ಥೆಯು ಲಾಭದಲ್ಲಿ ನಡೆಯಬೇಕು. ಸ್ವಂತ ಭೂಮಿ, ಸ್ವಂತ ಕಟ್ಟಡ, ಆಟದ ಮೈದಾನ... ಹೀಗೆ ಸಂಸ್ಥೆಯ ಖರ್ಚು ಏರಿದಂತೆ ಪಾಲಕರ ಮೇಲೆ ಶಿಕ್ಷಣ ಶುಲ್ಕದ ಭಾರವೂ ಹೆಚ್ಚುತ್ತಿದೆ. ಹೆಚ್ಚೆಚ್ಚು ಫೀ; ಜೊತೆಗೆ ಡೋನೆಷನ್. ಹಣವಿದ್ದವರಿಗೆ ಮಾತ್ರ ಖಾಸಗಿ ಸಂಸ್ಥೆಗಳಲ್ಲಿ ಶಿಕ್ಷಣ ಕೈಗೆಟಕುವಂತಾಯಿತು. ಇಷ್ಟೆಲ್ಲಾ ಕೊಟ್ಟು ಕಲಿಸಲು ಸಾಧ್ಯವಾಗದ ಜನರು ಶಾಲೆಯ ಸನಿಹ ಹಾಯದಾದರು.ಶಿಕ್ಷಣ ಎಂಬುದು ಲಾಭವಿರುವ ಉದ್ಯಮವೆಂದು

ಮನಗಂಡು ಹೆಚ್ಚೆಚ್ಚು ಖಾಸಗೀ ಸಂಸ್ಥೆಗಳು ಈ ರಂಗಕ್ಕಿಳಿದವು. ಕ್ರಮೇಣವಾದರೂ ತನ್ನ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚೆಚ್ಚು ಹಣ ಮೀಸಲಿಡುತ್ತ ಹೋಗಬೇಕಾಗಿದ್ದ ಸರಕಾರ ಹಾಗೆ ಮಾಡದೆ ಹೋಗಿದ್ದರಿಂದ ಸರಕಾರಿ ಶಾಲೆಗಳು ಸೊರಗಿದವು.

ದೇಶದ ಎಲ್ಲಾ ಮಕ್ಕಳಿಗೂ ಅವರ ಹಿನ್ನೆಲೆ ಏನೇ ಇದ್ದರೂ ಶಿಕ್ಷಣ ಮಾತ್ರ ಸಮಾನವಾಗಿ ಸಿಗುತ್ತಿರಬೇಕು ಎಂಬುದೊಂದು ಕನಸು. ಅಮೆರಿಕಾ, ಕ್ಯೂಬಾ, ಜಪಾನು, ರಶಿಯಾ, ಸ್ವಿಡನ್, ಜರ್ಮನಿ, ಫ್ರಾನ್ಸ್ ಇವೆಲ್ಲ ದೇಶಗಳಲ್ಲಿ ಈ ಕನಸು ಸಾಕರಗೊಂಡಿದೆ. ಸಮಾನ ಶಿಕ್ಷಣವೆಂದರೆ ಇಡೀ ದೇಶದಲ್ಲಿಯೂ ಅದೇ ಪಾಠ, ಅದೇ ಅಧ್ಯಾಯ, ಅದೇ ಪದ್ಯ ಕಲಿಯಬೇಕೆಂತಲ್ಲ. ಬದಲಿಗೆ ಶಿಕ್ಷಣಕ್ಷೇತ್ರದಲ್ಲಿ ಅವಕಾಶಗಳು ಸಮಾನವಾಗಿರಬೇಕು ಎಂದು. ಹಳ್ಳಿಯಲ್ಲಿ ಕಲಿತವರು ದಿಲ್ಲಿಯಲ್ಲಿ ಕಲಿತವರಿಗಿಂತ ಕಡಿಮೆಯವರಾಗಿರಬಾರದು. ಶಿಕ್ಷಣಮಟ್ಟ, ಗಳಿಸುವ ಜ್ಞಾನದ ಮಟ್ಟ ಇಡೀ ದೇಶದಲ್ಲೂ ಒಂದೇ ತೆರನಾಗಿರಬೇಕು.

ಭಾರತದಲ್ಲಿ ಲಾರ್ಡ್ ಮೆಕಾಲೆ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದಾಗ ಬ್ರಿಟಿಷ್ ಸರಕಾರ ನಡೆಸಲು ಬೇಕಾದ ಗುಮಾಸ್ತರುಗಳನ್ನು ತಯಾರು ಮಾಡುವುದೇ ಅವರ ಉದ್ದೇಶವಾಶಗಿತ್ತು. ಆ ಪದ್ಧತಿಯೇ ಇಂದಿಗೂ ನಮ್ಮಲ್ಲಿರುವುದು ನಮ್ಮ ದುರದೃಷ್ಟ. ಇಂದು ಶಿಕ್ಷಣವೆಂದರೆ ನೌಕರಿಗಾಗಿ ಶಿಕ್ಷಣವಾಗಿದೆ. ಕಲಿತವರು ನೌಕರಿಗೆ ಹೋಗುತ್ತಾರೆ. ನೌಕರಿಯ ಸಾಧ್ಯತೆ ಇಲ್ಲದವರು ಶಾಲೆಗೆ ಹೋಗುವ ಅವಶ್ಯಕತೆಯೇ ಇಲ್ಲ ಎನ್ನುವ ಭಾವನೆ ಜನಸಾಮಾನ್ಯರಲ್ಲಿ ತುಂಬಿದೆ. ಶಾಲೆಗಳು ಜೀವನ ಶಿಕ್ಷಣವನ್ನು ಕೊಡುತ್ತಿಲ್ಲದಿರುವುದು ಇದಕ್ಕೆ ಕಾರಣ.

ನಮ್ಮ ಶಿಕ್ಷಣ ಹೇಗಿರಬೇಕೆಂದು ರೂಪಿಸಲು ಸರಕಾರವು ೧೯೬೪ ರಲ್ಲಿ ಕೊಠಾರಿ ಆಯೋಗವನ್ನು ರಚಿಸಿತು. ಕೊಠಾರಿ ಆಯೋಗವು ಸಮಾನ ಶಾಲಾ ವ್ಯವಸ್ಥೆಯ ಸ್ವರೂಪವನ್ನು ಸರಕಾರದ ಮುಂದಿಟ್ಟಿತು. ಶಿಕ್ಷಣವು ಜನರಲ್ಲಿ ಸಮಾನತೆಯನ್ನು ತರುವ ಸಾಧನವಾಗಬೇಕೆ ಹೊರತು ಅಸಮಾನತೆಯನ್ನು ಬಿತ್ತಬಾರದು ಎಂಬುದು ಕೊಠಾರಿ ಆಯೋಗದ ಮುಖ್ಯ ಪಾಠ.

ಜಾತಿ, ಮತ, ಲಿಂಗ, ವಾಸಿಸುವ ಪ್ರದೇಶ ಏನೇ ಇದ್ದರೂ ದೇಶದ ಮಕ್ಕಳಿಗೆಲ್ಲ ಶಿಕ್ಷಣ ಮಾತ್ರ ಸಮಾನವಾಗಿರಬೇಕು. ಒಳ್ಳೆಯ ಶಿಕ್ಷಣ ಕೇವಲ ಶ್ರೀಮಂತರ ಸೊತ್ತಾಗಬಾರದು, ಬದಲಿಗೆ ಎಲ್ಲರಿಗೂ ದೊರಕಬೇಕು. ಎಲ್ಲಾ ಶಾಲೆಗಳಲ್ಲೂ ಉತ್ತಮ ಗುಣಮಟ್ಟದ ತೃಪ್ತಿಕರ ಶಿಕ್ಷಣವು ಸಿಗುತ್ತಿರಬೇಕು. ಶಾಲೆಗಳಲ್ಲಿ ಮಕ್ಕಳು ಶುಲ್ಕ ತೆರುವಂತಾಗಬಾರದು. ಎಲ್ಲಾ ತಾಯ್ತಂದೆಗಳಿಗೂ ಈ ಶಾಲೆಗಳು ತೃಪ್ತಿ ತಂದಿದ್ದು ಉತ್ತಮ ಶಿಕ್ಷಣಕ್ಕಾಗಿ ಬೇರೆ ಕಡೆ ಅವರು ಹುಡುಕಿಕೊಂಡು ಹೋಗುವಂತಾಗಬಾರದು. ಅದು ಸ್ಥಳೀಯವಾಗಿ, ಹೆಚ್ಚೆಂದರೆ ನೆರೆಯ ಊರಲ್ಲಿ ಸಿಗುತ್ತಿರಬೇಕು.

ಶಿಕ್ಷಣ ರಂಗದಲ್ಲಿ ಸುಧಾರಣೆ ಎಂದರೆ ಮೊಟ್ಟ ಮೊದಲು ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಮೇಲಕ್ಕೇರಬೇಕು. ಇದಕ್ಕಾಗಿ ಸರಕಾರಿ, ಸ್ಥಳೀಯ ಸಂಘಟನೆಗಳ ಮತ್ತು ಅನುದಾನಿತ ಎಲ್ಲಾ ಶಾಲೆಗಳಲ್ಲೂ ಕಲಿಕಾ ಸಾಧನಗಳು, ಕಲಿಸುವಿಕೆಯ ಗುಣಮಟ್ಟ ಉತ್ತಮಗೊಳ್ಳಬೇಕು. ಉತ್ತಮಗೊಂಡು ಖಾಸಗೀ ಶಾಲೆಗಳಿಗೂ ಈ ಶಾಲೆಗಳಿಗೂ ಏನೇನೂ ವ್ಯತ್ಯಾಸ ಉಳಿಯಬಾರದು. ಆದಿವಾಸಿಗಳ ಪ್ರದೇಶ, ಗುಡ್ಡಗಾಡು, ನೆರೆಪೀಡಿತ ಬರಪ್ರದೇಶಗಳಲ್ಲಿ ಕೂಡಾ ಸರಿಯಾದ ಶಿಕ್ಷಣ ಸಿಗುತ್ತಿರುವಂತೆ ಅಲ್ಲಿಗೆ ವಿಶೇಷ ಸವಲತ್ತುಗಳನ್ನು ನೀಡಬೇಕು. ಮಗುವಿಗೆ ಪ್ರಾಥಮಿಕ ಹಂತದಲ್ಲಿ ಅದರ ಮಾತೃಭಾಷಾ ಮಾಧ್ಯಮ, ಪ್ರೌಢ ಶಾಲೆಗಳಲ್ಲಿ ಸ್ಥಳೀಯ ಭಾಷಾ ಮಾಧ್ಯಮವಿರಬೇಕು. ಇದನ್ನು ಮೀರಿ ಬೇರೆ ಭಾಷಾ ಮಾಧ್ಯಮದಲ್ಲಿ ಶಿಕ್ಷಣ ಕೊಡುತ್ತಿರುವ ಶಾಲೆಗಳಿಗೆ ಸರಕಾರವು ಅನುದಾನವನ್ನು ನಿಲ್ಲಿಸಬೇಕು. ಪರವಾನಗಿಯನ್ನು ರದ್ದುಗೊಳಿಸಬೇಕು. ಹೀಗೆ ಹೇಳುತ್ತದೆ ಕೊಠಾರಿ ಆಯೋಗ. ನಮ್ಮ ಪಾರ್ಲಿಮೆಂಟು ೧೯೬೮ ರಲ್ಲೊಮ್ಮೆ, ಮತ್ತು ೧೯೮೨ ರಲ್ಲೊಮ್ಮೆ ತನ್ನ ಶಿಕ್ಷಣ ನೀತಿಗಳಲ್ಲಿ ಕೊಠಾರಿ ಆಯೋಗದ ಸಲಹೆಗಳನ್ನು ಸ್ವೀಕರಿಸಿದೆ. ಆದರೆ ಇನ್ನೂವರೆಗೆ ಆ ದಿಶೆಯಲ್ಲಿ ಯಾವುದೇ ಸರಕಾರ ಒಂದು ಹೆಜ್ಜೆಯನ್ನು ಇರಿಸಿಲ್ಲ. ೪೦ ವರ್ಷಗಳಾದವು. ದಾರಿ ಕವಲೊಡೆದು ಬಹುದೂರ ಸಾಗಿದೆ. ಖಾಸಗೀ ಶಾಲೆಗಳ ಸಂಖ್ಯೆಯಲ್ಲೂ ಹೆಚ್ಚಳ, ಅವುಗಳ ಬಲದಲ್ಲೂ ಹೆಚ್ಚಳ, ಸರಕಾರಿ ಮತ್ತು ಖಾಸಗೀ ಶಾಲೆಗಳ ಮಧ್ಯೆ ದೊಡ್ಡ ಕಂದರವೇ ಇದೆ ಇಂದು. ಹಿಂದೆ ಕೊಠಾರಿ ಆಯೋಗ ತನ್ನ ಸಲಹೆಗಳನ್ನು ಮಂಡಿಸಿದಾಗ ಸತತ ೧೦ ವರ್ಷಗಳು ಕೆಲಸ ಮಾಡಿ, ಸರಕಾರಿ, ಅನುದಾನಿತ ಮತ್ತು ಖಾಸಗೀ ಶಾಲೆಗಳ ನಡುವಿನ ಅಂತರವನ್ನು ಇಲ್ಲವಾಗಿಸಬೇಕೆಂದು ಹೇಳಿತ್ತು. ಅದಕ್ಕಾಗಿ ಕಾನೂನುಗಳಾಗಬೇಕು. ಟ್ಯೂಷನ್ ಫೀ, ಡೊನೇಷನ್‌ಗಳು ಇಲ್ಲವಾಗಿಸುವಂಥ ಕಠಿಣ ಕಾನೂನುಗಳು ಆಗಬೇಕು ಎಂದು ಹೇಳಿತ್ತದು.

ಇವೆಲ್ಲ ಸಲಹೆಗಳಿಗೂ ತಲೆಯಾಡಿಸುತ್ತ, ಭಾಷಣಗಳಲ್ಲಿ ಅದನ್ನೇ ಉದ್ಗರಿಸುತ್ತ ನಮ್ಮ ಧುರೀಣರು ನಮ್ಮದೇ ಮಕ್ಕಳ ಮೇಲೆ ಘೋರ ಅನ್ಯಾಯವೆಸಗುತ್ತ ಹೊರಟಿದ್ದಾರೆ. ನಾಲ್ಕು ದಶಕಗಳಾದರೂ ಯಾವೊಂದು ಸರಕಾರವೂ ಸಮಾನ ಶಾಲಾ ವ್ಯವಸ್ಥೆ ಜಾರಿಗೆ ಪ್ರಯತ್ನ ಮಾಡಲೇ ಇಲ್ಲ. ಬದಲಿಗೆ ಸರಕಾರ ರಚಿಸಿದ ಧುರೀಣರೆಲ್ಲರದ್ದೂ ಖಾಸಗೀ ಶಾಲೆಗಳು ಬೆಳೆಯುತ್ತ ಹೋದವು. ಸಮಾಜದ ಪ್ರತಿಷ್ಠಿತರೆನಿಸಿದವರೆಲ್ಲರದ್ದೂ ಒಂದೊಂದು ಶಿಕ್ಷಣ ಸಂಸ್ಥೆ ಇದ್ದೇ ಇದೆ. ಜಾತಿ, ಪಂಗಡ, ಕೋಮು ಗುಂಪುಗಳ ಮುಂದಾಳುಗಳೆಲ್ಲರೂ ಶಾಲೆ ಸ್ಥಾಪಿಸುತ್ತ ಶಾಲೆಯನ್ನು ಒಂದು ಹಣ ಮಾಡುವ ದಂಧೆಯನ್ನಾಗಿಸಿಕೊಂಡರು.

ಶಿಕ್ಷಣದ ಸುಧಾರಣೆಗೆಂದು ೧೯೮೬ ರಲ್ಲಿ ಮತ್ತೊಮ್ಮೆ ಆಚಾರ್ಯ ರಾಮಮೂರ್ತಿ ಅಯೋಗವನ್ನು ರಚಿಸಲಾಯ್ತು. ಸಮಾನ ಶಾಲಾ ವ್ಯವಸ್ಥೆ ಜಾರಿಗೆ

ಬಾರದಿರುವುದಕ್ಕೆ ರಾಮಮೂರ್ತಿ ಆಯೋಗ ಮುಂದಿನಂತೆ ಕಾರಣಗಳನ್ನು ಕೊಡುತ್ತದೆ. ಮೊದಲನೆಯದಾಗಿ ಸ್ಥಿತಿವಂತರು ಯಾರೂ ತಮ್ಮ ಮಕ್ಕಳನ್ನು ಸರಕಾರಿ ಶಾಲೆಗೆ ಕಳಿಸುವುದಿಲ್ಲ. ಬೇರೆಯವರಿರಲಿ, ಸ್ವತಃ ಸರಕಾರಿ ಶಿಕ್ಷಕರೇ ತಮ್ಮ ಮಕ್ಕಳನ್ನು ತಮ್ಮ ಶಾಲೆಗೆ ಕಳಿಸುವುದಿಲ್ಲ. ಒಂದಷ್ಟು ದುಡ್ಡು ಹೋದರೆ ಹೋಗಲಿ, ಸಮರ್ಥ ಶಿಕ್ಷಕರಿರುವ, ಕಲಿಕಾ ಸಾಮಗ್ರಿಗಳಿರುವ, ಆಟೋಟಕ್ಕೆ ಅವಕಾಶವಿರುವಂಥ ಶಾಲೆಗಳಿಗೇ ಕಳಿಸಬಯಸುತ್ತಾರೆ. ಸಮಾಜದ ಗಣ್ಯರಿಂದ ನಗಣ್ಯವಾಗಿಸಿಕೊಳ್ಳುವ ಸರಕಾರಿ ಶಾಲೆಗಳು ಉಪಚಾರವಿಲ್ಲದೇ ಸೊರಗುತ್ತವೆ. ಸಮಾಜದ ಅತಿ ಕೆಳಸ್ತರದಲ್ಲಿರುವ ಜನರು ಮಾತ್ರ ತಮ್ಮ ಮಕ್ಕಳನ್ನು ಸರಕಾರಿ ಶಾಲೆಗಳಿಗೆ ಕಳಿಸುತ್ತಿದ್ದು ಅವರಿಗೂ ಶಾಲಾ ಶಿಕ್ಷಕರಿಗೂ ಯಾವುದೇ ಸಂಬಂಧವೆ ಇಲ್ಲ. ತಾಯ್ತಂದೆಗಳೊಂದಿಗೆ ಯಾವುದೇ ಸಂವಾದವಿಲ್ಲದೇ, ಉತ್ತಮ ಶಿಕ್ಷಕರನ್ನು ಹಾಕಬೇಂಬ ಬೇಡಿಕೆಯೂ ಇಲ್ಲದೆ ಸರಕಾರಿ ಶಾಲೆಗಳು ವಿದ್ಯೆಕೊಡುವಲ್ಲಿ ಹಿಂದೆ ಬೀಳುತ್ತವೆ.

ಹಿಂದುಳಿದ, ಅಲ್ಪಸಂಖ್ಯಾತ ವರ್ಗಗಳ ಜನರಿಗೆ ಜಾತಿ ಕೋಮಿನ ಹೆಸರಲ್ಲಿ ಶಾಲೆ ಸ್ಥಾಪಿಸಲು ನೀಡುವ ಪರವಾನಗಿಯು ಸಮಾನ ಶಾಲಾ ವ್ಯವಸ್ಥೆಯ ವಿರುದ್ಧವಾಗಿದೆ. ಅವರು ಮಾಡಿದ್ದನ್ನು ವಿರೋಧಿಸುವುದೂ ಅಪರಾಧವೆನಿಸಿ ಅಲ್ಲಿಯೂ ಶಿಕ್ಷಣ ಸುಧಾರಣೆಗೆ ಅವಕಾಶವಿಲ್ಲದಾಗಿದೆ.

ಸಮಾನ ಶಿಕ್ಷಣವನ್ನು ಜಾರಿಗೊಳಿಸಲು ರಾಜಕೀಯ ಇಚ್ಛಾ ಶಕ್ತಿಯೆಂಬುದೇ ಇಲ್ಲದೆ ಇಂಗ್ಲಿಷ್ ಮೀಡಿಯಂ ಶಾಲೆ. ಡೋನೇಶನ್ ತೆಗೆದುಕೊಳ್ಳುವ ಶಾಲೆಗಳು ಅಣಬೆಗಳಂತೆ ಬುರು ಬುರು ಹುಟ್ಟಿದವು. ಪರ್ಮಿಶನ್ ಕೊಡುವುದಿಲ್ಲ, ಕೊಡುವುದಿಲ್ಲ ಎನ್ನುತ್ತಲೇ ಸರಕಾರವು ಹಿಂಬಾಗಿಲಿನಿಂದ ಪರವಾನಗಿ ಕೊಡುತ್ತ ಹೋಯಿತು. ಪ್ರತಿಷ್ಠಿತ ಸಂಘಟನೆಗಳು, ರಾಜಕೀಯ ಧುರೀಣರು, ಮಠಗಳು ಎಲ್ಲರೂ ಶಾಲೆ ಸ್ಥಾಪನೆಯಲ್ಲಿ ಪೈಪೋಟಿಗಿಳಿದವು. ಎಲ್ಲವನ್ನು ನಿಯಂತ್ರಿಸಬೇಕಾಗಿದ್ದ ಸರಕಾರ ತಾನೇನೂ ಸ್ಪರ್ಧೆಯಿಂದ ಹಿಂದುಳಿಯಬಾರದೆಂದು ಸೈನಿಕ, ನವೋದಯ, ಮೋರಾರ್ಜಿ ಎಂದು ವಿಶೇಷ ಶಾಲೆಗಳನ್ನು ತೆರೆಯಿತು. ಪ್ರವೇಶ ಪರೀಕ್ಷೆಗಳಲ್ಲಿ ಪಾಸಾದ ಮಕ್ಕಳಿಗೆಂದು ಈ ವಿಶೇಷ ಶಾಲೆ. ಅವರು ನಡೆಸುವ ಪ್ರವೇಶ ಪರೀಕ್ಷೆಗಳಿಗೆಂದು ಹೆಚ್ಚಿನ ಟ್ಯೂಷನ್ ಕೊಡಲು ಶಿಕ್ಷಕರು ತಯಾರಾದರು. ತನಗೆ ಅನ್ನ ಕೊಡುವ ಶಾಲೆಯಲ್ಲಿ ಕಲಿಸದ ಮನುಷ್ಯ ಟ್ಯೂಶನ್ ಕೇಂದ್ರಗಳಲ್ಲಿ ಒಳ್ಳೆಯ ಪಾಠ ಹೇಳುವವನಾದ. ಟ್ಯೂಶನ್ ದಂಧೆ ಬೆಳೆಯಿತು. ಟ್ಯೂಶನ್ ಹೇಳಿಸಲಿಕ್ಕಾಗದವರಿಗೆ ಇವೆಲ್ಲ ಕೈಗೆಟಕುವ ಪ್ರಶ್ನೆಯೇ ಅಲ್ಲ. ಪ್ರಾಥಮಿಕ ಶಾಲಾ ಹಂತದಲ್ಲಿಯೇ ಮಕ್ಕಳು ಮಕ್ಕಳ ಮಧ್ಯೆ ಬೇಧ ಎಣಿಸುವ ಇಂಥ ಕ್ರೂರ ವ್ಯವಸ್ಥೆಯು ಬಹುಶಃ ಬೇರೆಲ್ಲಿಯೂ ಇರಲಿಕ್ಕಿಲ್ಲ.

ಪ್ರಾಥಮಿಕ ಶಿಕ್ಷಣದಲ್ಲಿ ಖಾಸಗೀಕರಣವನ್ನು ಕೊನೆಗಾಣಿಸಿ ಎಲ್ಲರಿಗೂ

ಸಮಾನ ಶಿಕ್ಷಣ ಸಿಗುವಂತೆ ಮಾಡಬೇಕಾದ ಸರ್ಕಾರವು ವರ್ಷದಿಂದ ವರ್ಷಕ್ಕೆ ಅದರಿಂದ ದೂರವೇ ಹೋಗುತ್ತಿರುವುದನ್ನು ನೋಡಿ ಜನಸಂಘಟನೆಗಳಿಗೆ ಸುಮ್ಮನೆ ಕೂಡುವುದಾಗಲಿಲ್ಲ. ಶಿಕ್ಷಣವು ಮಕ್ಕಳ ಹಕ್ಕು. ಅದನ್ನು ಕೊಡಮಾಡುವುದು ಸರ್ಕಾರದ ಕರ್ತವ್ಯ ಎಂದು ಅದಕ್ಕಾಗಿ ರಾಷ್ಟ್ರೀಯ ಒಕ್ಕೂಟವೊಂದು ರಚನೆಯಾಗಿ ೨೦೦೦ನೇ ಇಸ್ವಿಯಿಂದಲೂ ಮಕ್ಕಳ ಹಕ್ಕುಗಳಿಗಾಗಿ ಅದು ಹೋರಾಡುತ್ತಿದೆ. ೨೦೦೧ರ ನವೆಂಬರ್ ೨೮ರಂದು ಪಾರ್ಲಿಮೆಂಟ್‌ನಲ್ಲಿ ಸಂವಿಧಾನದ ೮೩ನೇ ತಿದ್ದುಪಡಿಯನ್ನು ಮಂಡಿಸಹೊರಟಿದ್ದಾಗ ದೇಶದೆಲ್ಲಡೆಯಿಂದ ಬಂದ ಸುಮಾರು ಎಪ್ಪತ್ತು ಸಾವಿರಕ್ಕೂ ಹೆಚ್ಚು ಜನರು ಸಂಸತ್ ಭವನದ ಮುಂದೆ ರ‍್ಯಾಲಿಯನ್ನು ಮಾಡಿದರು. ದೇಶದೆಲ್ಲಡೆಗಳಿಂದ ಸಂಗ್ರಹಿಸಿದ ನಾಲ್ಕು ಲಕ್ಷ ಐವತ್ತು ಸಾವಿರ ಪತ್ರಗಳನ್ನು ಲೋಕಸಭೆ ಸ್ಪೀಕರ್ ಅವರಿಗೆ ಅರ್ಪಿಸಲಾಯಿತು. ಈ ಎಲ್ಲಾ ಪತ್ರಗಳದ್ದೂ ಒಂದೇ ಧ್ವನಿಯಾಗಿತ್ತು, ಸಮಾನ, ಅರ್ಥಪೂರ್ಣ, ಶುಲ್ಕವಿಲ್ಲದ ಮತ್ತು ಕಡ್ಡಾಯವಾದ ಶಿಕ್ಷಣವನ್ನು ಜಾರಿಯಲ್ಲಿ ತನ್ನಿ ಎಂದು.

೮೩ನೇ ತಿದ್ದುಪಡಿಯಲ್ಲಿ ಶಿಕ್ಷಣಕೊಡುವ ಜವಾಬ್ದಾರಿಯನ್ನು ಸರ್ಕಾರ ತನ್ನ ಹೆಗಲಿನಿಂದ ತಾಯ್ತಂದೆಗಳ ಹೆಗಲಿಗೆ ದಾಟಿಸಲಿತ್ತು. ಎಲ್ಲರಿಗೂ ಕಡ್ಡಾಯ ಉಚಿತ ಶಿಕ್ಷಣ ಕೊಡಲು ತನ್ನಲ್ಲಿ ಹಣವಿಲ್ಲವೆಂದೇ ಸರ್ಕಾರವು ವಾದಿಸಿತ್ತು.

ಪಾರ್ಲಿಮೆಂಟಿನ ಚರ್ಚೆಯಲ್ಲಿ ಮಕ್ಕಳ ಶಿಕ್ಷಣದ ಹಕ್ಕಿನ ಬಗ್ಗೆ ಒಬ್ಬರಿಗಿಂತ ಒಬ್ಬರು ಚೆನ್ನಾಗಿ ಮಾತನಾಡಿದ್ದ ಎಲ್ಲಾ ಪಕ್ಷದವರು ಮುಂದೆ ಮಸೂದೆಗೆ ವೋಟುಹಾಕುವ ಪ್ರಸಂಗ ಬಂದಾಗ ಸುಮ್ಮನೆ ಕೈ ಎತ್ತಿ ಅವಿರೋಧವಾಗಿ ಬಿಲ್ ಪಾಸ್ ಮಾಡಿಸಿದರು. ಅಲ್ಲಿಂದ ರಾಜ್ಯಸಭೆಗೆ ಹೋದ ಮಸೂದೆಯು ಇನ್ನೂವರೆಗೆ ಅಲ್ಲಿಯೇ ಕುಳಿತಿದೆ. ಆನಂತರ ೨೦೦೩ರಲ್ಲಿ ಶಿಕ್ಷಣದ ಕರಡು ಮಸೂದೆಯು ತಯಾರಾಗಿದ್ದು ಇದು ಐದನೆಯ ಕರಡು ಮಸೂದೆಯಾಗಿದೆ. ಪ್ರತಿಬಾರಿ ಪುನರ್ ವಿಮರ್ಶೆಗೊಂಡಾಗಲೂ ಸರ್ಕಾರವು ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದ್ದು, ಹೆಚ್ಚೆಚ್ಚು ಖಾಸಗೀಕರಣದತ್ತಲೇ ಒಲವು ತೋರಿಸುತ್ತಿರುವುದು ಸ್ಪಷ್ಟ. ಪಾರ್ಲಿಮೆಂಟ್ ಅಧಿವೇಶನದಲ್ಲಿ ಶಿಕ್ಷಣ ಮಸೂದೆ ಮಂಡನೆಯಾಗಿದೆ. ಮಕ್ಕಳಿಗೆ ಶಿಕ್ಷಣ ನೀಡುವ ಜವಾಬ್ದಾರಿಯನ್ನು ತಾಯಿ ತಂದೆಗಳ ಹೆಗಲಿಗೆ ಹಾಕುವ ಪ್ರಯತ್ನವು ಸಮಾನ ಶಾಲಾ ವ್ಯವಸ್ಥೆಯಿಂದ ಬಹುದೂರ ನಿಂತಿರುವ ಖಾಸಗೀಕರಣಕ್ಕೆ ತುಂಬು ಪ್ರೋತ್ಸಾಹಕೊಡುವ ಮಸೂದೆಯಾಗಿದೆ. ದೇಶದ ಮೂವತ್ತೈದು ಕೋಟಿ ಹಿಂದುಳಿದ, ದಲಿತ, ನಿರ್ಗತಿಕ ಮಕ್ಕಳ ಶಿಕ್ಷಣದ ಭವಿಷ್ಯ ಮಣ್ಣುಗೂಡುವ ಸಾಧ್ಯತೆ ಈ ಮಸೂದೆಯೊಳಗೆ ಅಡಗಿದೆ. ಅದನ್ನು ಬದಲಿಸಬಲ್ಲವರಾರು?

***

ಮೌನದಿಂದ ಯುವ ಮನಸ್ಸನ್ನು ಪರಿವರ್ತಿಸಿದ ಗಾಂಧೀ

-ಸೋಮೇಶ್ ಪುರೋಹಿತ್

ಸಂಗ್ರಹ:- ಕೆ.ಸೀತಾರಾಮಯ್ಯಂಗಾರ್

೧೯೪೭ರ ಸಮಯ. ಗಾಂಧಿಯವರ ಅಹಿಂಸೆಯು ಅತ್ಯಂತ ಕಠಿಣ ಪರೀಕ್ಷೆಗೆ ಒಳಗಾಗುತ್ತಿದ್ದ ಕಾಲ. ಮುಸ್ಲಿಂ ಲೀಗ್‌ನ ಡೈರೆಕ್ಟ್ ಆಕ್ಷನ್ ಫಲವಾಗಿ ಹಿಂದೂಗಳಲ್ಲೂ ಮುಸಲ್ಮಾನರಲ್ಲೂ ದ್ವೇಷಭಾವನೆ ಬೆಳೆದಿತ್ತು. ಹಿಂಸೆ ಎಲ್ಲೆಲ್ಲೂ ತಾಂಡವವಾಡುತ್ತಿತ್ತು. ಎರಡೂ ಜನಾಂಗದವರು ಮಾನವೀಯತೆಯನ್ನು ಪೂರ್ಣವಾಗಿ ಮರೆತು ರಾಕ್ಷಸೀ ಕೃತ್ಯಗಳಲ್ಲಿ ತೊಡಗಿದ್ದರು. ಇಂತಹ ಸ್ಥಿತಿಯಲ್ಲಿ ೭೭ ವರ್ಷದ ಗಾಂಧೀ, ಈ ಎರಡೂ ಧರ್ಮೀಯ ಹಿಂಸಾನಿರತರಿಗೆ ಮಾನವತೆಯ ಸಂದೇಶಸಾರಲು ತನ್ನ ನೆಚ್ಚಿನ ರಾಮನಾಮದ ಬಲದ ಸಂಗಡ ಸೇವಾಗ್ರಾಮದಿಂದ ಕಲ್ಕತ್ತ, ಕಲ್ಕತ್ತದಿಂದ ನೌಖಾಲಿ, ನೌಖಾಲಿಯಿಂದ ಬಿಹಾರ, ಅಲ್ಲಿಂದ ದೆಹಲಿಗೆ ರೈಲು,ಬಸ್ಸು, ಕಾಲ್ನಡಿಗೆಯಲ್ಲಿ ಊರೂರು, ಮನೆ ಮನೆಗೆ ಅಲೆಯುತ್ತಿದ್ದರು.

ನಿಜವಾಗಿಯೂ ಗಾಂಧೀಯವರ ಅಹಿಂಸೆ ಅತ್ಯಂತ ಕಠಿಣ ಒರೆಗಲ್ಲಿನ ಪರೀಕ್ಷೆಗೆ ಒಡ್ಡಲ್ಪಟ್ಟಿತ್ತು. ನೌಖಾಲಿಯಿಂದ ಭಾರತದ ಗೃಹಮಂತ್ರಿ ಸರ್ದಾರ್ ವಲ್ಲಭಭಾಯಿ ಪಟೇಲರಿಗೆ ಗಾಂಧೀ ಒಂದು ಪತ್ರ ಬರೆದಿದ್ದರು. ಅದರಲ್ಲಿ "ಒಂದು ತಲೆ ಕೂದಲನ್ನು ನೂರು ಭಾಗ ಮಾಡಿ ತೂಗಬಲ್ಲ ತಕ್ಕಡಿ ಒಂದಿದ್ದರೆ ಅಂತಹ ತಕ್ಕಡಿಯಲ್ಲಿ ತೂಗಿ ನನ್ನ ಅಹಿಂಸೆಯನ್ನು ಪರೀಕ್ಷೆ ಮಾಡುವಷ್ಟು ಅಹಿಂಸೆಯ ಕಠಿಣ ಪರೀಕ್ಷೆ ಈಗ ಇಲ್ಲಿ ನಡೆಯುತ್ತಿದೆ" ಎಂದು ಬರೆದಿದ್ದರು.

ತಮ್ಮ ಈ ಪ್ರೇಮ-ಭ್ರಾತೃತ್ವಗಳ ಸಂದೇಶ ಸಾರಲು ಗಾಂಧೀ ದಿಲ್ಲಿಯಿಂದ ರಾವಲ್ಪಿಂಡಿ ಮಾರ್ಗವಾಗಿ ಕಾಶ್ಮೀರಕ್ಕೆ ಹೊರಟಿದ್ದರು. ಅವರು ಪ್ರಯಾಣಿಸುತ್ತಿದ್ದ ಫ್ರಾಂಟಿಯರ್ ಎಕ್ಸ್‌ಪ್ರೆಸ್ ರೈಲು ಒಂದೊಂದು ಸ್ಟೇಷನ್‌ಗೆ ಬಂದಾಗಲೂ ಸಹಸ್ರಾರು ಜನ ಅವರ ದರ್ಶನಕ್ಕಾಗಿ ಕಾದಿದ್ದು ಅವರು ಬಂದೊಡನೆಯೆ "ಮಹಾತ್ಮ ಗಾಂಧೀಕಿ ಜೈ, ಮಹಾತ್ಮ ಗಾಂಧೀ ಜಿಂದಾಬಾದ್" ಎಂದು ಜೈಕಾರ ಮುಗಿಲು ಮುಟ್ಟುವಂತೆ ಕೂಗುತ್ತಿದ್ದರು. ಹರಿಜನ ಸೇವಾನಿಧಿಗೆ ಕಾಣಿಕೆ ನೀಡಿ ಕೃತಾರ್ಥರಾಗುತ್ತಿದ್ದರು.

ಅಮೃತಸರದ ಸ್ಟೇಷನ್ ಬಂತು. ಫ್ರಾಂಟಿಯರ್ ಮೇಲ್ ಗಾಡಿ ನಿಂತಿತು. ಗಾಂಧೀಜಿ ನೆರೆದಿದ್ದ ಜನಸ್ತೋಮಕ್ಕೆ ವಂದಿಸಲು ತಾವು ಕುಳಿತಿದ್ದ ಬೋಗಿಯ ಬಾಗಿಲ ಬಳಿ ಬಂದು ನಿಂತರು. ಆದರೆ ಅಲ್ಲಿನ ಪರಿಸ್ಥಿತಿ ಬೇರೆ ಸ್ಟೇಷನ್‌ಗಳಂತಿರಲಿಲ್ಲ.

ನೆರೆದಿದ್ದ ಜನರನ್ನು ತಳ್ಳುತ್ತಾ ಇನ್ನೂರು ಮುನ್ನೂರು ಜನ ವಿದ್ಯಾರ್ಥಿ ಯುವಕರು ಗಾಡಿಯ ಬಾಗಿಲಬಳಿ ಬಂದು ನಿಂತರು. ಅವರು ತಮ್ಮ ಕೈಗಳಲ್ಲಿ ಕಪ್ಪು ಬಾವುಟಗಳನ್ನು ಹಿಡಿದುಕೊಂಡು ಜೈಕಾರಕ್ಕೆ ಬದಲಾಗಿ "ಗಾಂಧೀ ಗೋ ಬ್ಯಾಕ್" ಎಂದು ಗಗನ ಮುಟ್ಟುವಷ್ಟು ಜೋರಾಗಿ ಆರ್ಭಟಿಸತೊಡಗಿದರು. ಈ ರೀತಿ ಅನಿರೀಕ್ಷಿತ ವಿರೋಧಿ ಸ್ವಾಗತ ಗಾಂಧಿಗೆದುರಾಯಿತು. ೨೮ ವರ್ಷಗಳ ಹಿಂದೆ ಎಂದರೆ ೧೯೧೯ರಲ್ಲಿ ಇದೇ ಅಮೃತಸರದಲ್ಲಿ ಸಹಸ್ರಾರು ಜನ ಜಯಕಾರ ಮಾಡುತ್ತ ಗಾಂಧೀ ಯವರನ್ನು ಸ್ವಾಗತಿಸಿದ ಕಡೆ ೧೯೪೭ರಲ್ಲಿ "ಗಾಂಧೀ ಗೋ ಬ್ಯಾಕ್" ಘೋಷಣೆ ಕೂಗುತ್ತ ಕಪ್ಪುಬಾವುಟ ಬೀಸುತ್ತ ಗಾಂಧಿಯವರಿಗೆ ಬಹಿಷ್ಕಾರ ವ್ಯಕ್ತವಾಯಿತು.

ಕಾಲದ ಅಂತರದಲ್ಲಿ ಯುವಕರ ಮನಸ್ಸಿನಲ್ಲಿ ಉಂಟಾದ ಉದ್ರೇಕದ ಫಲ ಇದಾಗಿತ್ತು. ಆದರೆ ಅನಾಸಕ್ತ, ಸ್ಥಿತಪ್ರಜ್ಞ ಗಾಂಧೀ ಸ್ವಾಗತ–ಬಹಿಷ್ಕಾರಗಳನ್ನು ಸಮಾನವಾಗಿ ಸ್ವೀಕರಿಸಿದರು.

ಹಿಂಸಾಯುಕ್ತರೂ, ಉದ್ರೇಕಪೂರ್ಣರೂ ಆಗಿದ್ದ ಯುವಕರಿಗೆ ದೂರದಿಂದ ಬಹಿಷ್ಕಾರದ ಘೋಷಣೆ ಕೂಗಿದರೆ ತೃಪ್ತಿ ಆದೀತೇ? ರೈಲು ಡಬ್ಬಿಯ ಕಿಟಕಿಗಳ ಬಳಿ ಮುಖವಿಟ್ಟು ತಾರಕ–ಕರ್ಕಶ ಸ್ವರದಲ್ಲಿ "ಗಾಂಧೀ ಗೋ ಬ್ಯಾಕ್" ಘೋಷಣೆ ಕೂಗತೊಡಗಿದರು. ಈ ಕಿವಿಗಡಚಿಕ್ಕುವ ಕರ್ಕಶ ಕೂಗು ಗಾಂಧೀಜಿಯವರಿಗೆ ಸಹಿಸಲು ಅಸಾಧ್ಯವಾಯಿತು.

ಪೋಲಿಸರು ಆ ಯುವಕರನ್ನು ದೂರದೂಡಲೆತ್ನಿಸುತ್ತಿದ್ದರು. ಗಾಂಧೀ ಪೋಲಿಸರ ಯತ್ನವನ್ನು ತಡೆದರು. ಅವರು ಅಮಾಯಕ ಹುಡುಗರು, ತಾವು ಏನು ಮಾಡುತ್ತಿದ್ದೇವೆ ಎಂಬುದರ ಅರಿವಿಲ್ಲದವರು, ಕೂಗಲಿ ಬಿಡಿ; ಸರಿಯಾದದಾರಿ ತಿಳಿಯದೆ, ತಂದೆ ತಾಯಿಯರ, ಸಮಾಜದ ಹಿರಿಯರ ಸರಿಯಾದ ಮಾರ್ಗದರ್ಶನ ಸಿಗದ ಈ ಯುವಕರು ನನ್ನ ವಿರುದ್ಧ ಬಹಿಷ್ಕಾರ ಪ್ರದರ್ಶಿಸುತ್ತಿದ್ದಾರೆ ಇದರಲ್ಲಿ ಅವರ ತಪ್ಪೇನು ಇಲ್ಲ ಎಂದರು.

ಪೋಲಿಸ್ ಪಡೆ ಗಾಂಧಿಯವರ ಮಾತಿಗೆ ಮಣಿದು ಮೂಕ ಪ್ರೇಕ್ಷಕರಾಗಿ ನಿಲ್ಲಬೇಕಾಯಿತು. ಯುವಕ ಸಮೂಹ ಗಂಟಲು ಹರಿಯುವಷ್ಟು ಜೋರಾಗಿ ಕೂಗುತ್ತಲೇ ಇತ್ತು. ಗಾಂಧೀ ಕಣ್ಣು ಮುಚ್ಚಿಕೊಂಡರು, ಕಿವಿಗಳಿಗೆ ಬೆರಳುಗಳನ್ನಿಟ್ಟುಕೊಂಡು ಮೌನವಾಗಿ ಶಾಂತಿ ನಿಶ್ಚಲತೆಯಿಂದ ನಿಂತೇ ಇದ್ದರು, ರೈಲು ಹೊರಡುವ ಸಮಯ ಬಂತು. ಗಾರ್ಡ್ ಸೀಟಿ ಊದಿದರು. ಹಸಿರು ಬಾವುಟ ಬೀಸಿದರು. ಯುವಕರು "ಗಾಂಧೀ ಗೋ ಬ್ಯಾಕ್" ಎಂದು ಕೂಗುತ್ತಲೇ ಇದ್ದರು, ಗಾಡಿ ಹೋರಟೇ ಬಿಟ್ಟಿತು. ಅಲ್ಲಿನ ವಾತಾವರಣದಲ್ಲೆಲ್ಲ 'ಗಾಂಧೀ

ಗೋ ಬ್ಯಾಕ್' ಘೋಷಣೆ ಗುನುಗುನಿಸುತ್ತಿತ್ತು.

ಆ ಯುವಕರ ದಂಡು ಗಾಂಧಿಯವರಿಗೇನೋ ತುಂಬಾ ಮಾನಸಿಕ ಯಾತನೆ ಉಂಟುಮಾಡಿತ್ತು, ಆದರೆ ಗಾಂಧೀ ರೈಲಿನಲ್ಲಿ ಹೊರಟು ಹೋದನಂತರ ತಾವು ಮಾಡಿದ ಉದ್ಧಟತನ ಮತ್ತು ತಪ್ಪಿಗಾಗಿ ತುಂಬಾ ನಾಚಿಕೆ ಮತ್ತು ಪಶ್ಚಾತ್ತಾಪ ಪಟ್ಟರು, ಕಣ್ಣು ಮುಚ್ಚಿಕೊಂಡು ಕಿವಿಗೆ ಬೆರಳು ಸಿಕ್ಕಿಸಿಕೊಂಡು ಮೌನವಾಗಿ ನಿಂತಿದ್ದ ಗಾಂಧಿಯವರ ಚಿತ್ರ ಯುವಕರ ಮನಃಪಟಲದಲ್ಲಿ ಖಾಯಂ ಆಗಿ ಕಾಣುತ್ತಲೇ ಇತ್ತು. ಅವರಿಗೆ ಆ ಚಿತ್ರವನ್ನು ಮರೆಯಲು ಆಗಲೇ ಇಲ್ಲ.

ಆ ಯುವಕರಲ್ಲಿ ಒಬ್ಬ, "ನಮ್ಮ ತಾತನಷ್ಟು ವಯಸ್ಸಿನ, ಸಾತ್ವಿಕ ಗಾಂಧೀಯವರಿಗೆ ಇಷ್ಟು ಸತಾಯಿಸಿ, ಯಾತನೆ ಉಂಟುಮಾಡಿ ನಾವು ತಪ್ಪು ಮಾಡಿದೆವು, ಕೋಮುಗಲಭೆಗಳಲ್ಲಿ ಬಲಿಪಶುಗಳಾಗಿ ನೊಂದು, ನಿರಾಶ್ರಿತರಾದ ದುಃಖಿಗಳಿಗೆ ಧೈರ್ಯ, ಮಿತ್ರತ್ವ, ಸಹನೆಗಳನ್ನು ನೀಡಲು ಬಂದ ಗಾಂಧೀಜಿಗೆ ಅಸಹನೀಯ ಯಾತನೆ ಉಂಟುಮಾಡಿ ನಾವುಗಳಿಸಿದ್ದಾದರೂ ಏನು"? ಎಂದನು.

ಮತ್ತೊಬ್ಬನು "ಗಾಂಧೀಯವರಿಗೆ ನಾವು ಇಷ್ಟೊಂದು ದುಃಖ ಉಂಟು ಮಾಡಿದರೂ ಅವರ ಬಾಯಿಂದ ಬಂದದ್ದಾದರೂ ಏನು? "ಅಮಾಯಕ ಮಕ್ಕಳು, ಅವರೇನು ಮಾಡುತ್ತಿದ್ದಾರೆಂಬುದುದರ ತಿಳುವಳಿಕೆ ಅವರಿಗಿಲ್ಲ" ಎಂದರು! ಅವರ ಈ ಮಾತುಗಳಲ್ಲಿ ನಮ್ಮ ಬಗ್ಗೆ ಎಷ್ಟು ಕ್ಷಮೆ, ಮಮತೆ ತುಂಬಿತ್ತು, ಹರಿಜನ ಸೇವಾನಿಧಿಗೆ ಜನರು ತಂದಿದ್ದ ಹಣವನ್ನು ಅವರು ಪಡೆಯಲೂ ನಾವು ಅವಕಾಶ ಕೊಡಲಿಲ್ಲವಲ್ಲ" ಎಂದನು.

ಒಟ್ಟಿನಲ್ಲಿ ಆ ಯುವಕರೆಲ್ಲ ನಾಚಿಕೆ ಅವಮಾನಗಳಿಂದ ತಲೆ ತಗ್ಗಿಸಿದ್ದರು.

ನಾಲ್ಕೈದು ದಿನಗಳನಂತರ ಗಾಂಧೀಯವರನ್ನು ದಿಲ್ಲಿಗೆ ಕರೆದೊಯ್ಯುತ್ತಿದ್ದ ಅದೇ ಫ್ರಾಂಟಿಯರ್ ಮೇಲ್ ಗಾಡಿ ಮತ್ತೆ ಅಮೃತಸರ ಸ್ಟೇಷನ್‌ನಲ್ಲಿ ಬಂದು ನಿಂತಿತು. ಅದೇ ವಿದ್ಯಾರ್ಥಿಗಳ ಸಮೂಹ ಮತ್ತೆ ಗಾಂಧೀ ಇದ್ದ ಡಬ್ಬಿಯ ಬಳಿ ಬಂದು ಸೇರಿದರು. ಈ ಬಾರಿ ಅವರ ಕೈಗಳಲ್ಲಿ ಕಪ್ಪುಬಾವುಟಗಳಿರಲಿಲ್ಲ, ಅದಕ್ಕೆ ಬದಲಾಗಿ ತ್ರಿವರ್ಣಧ್ವಜಗಳಿದ್ದವು "ಮಹಾತ್ಮ ಗಾಂಧೀ ಜಿಂದಾಬಾದ್" ಘೋಷಣೆ ಕೂಗುತ್ತಿದ್ದರು.

ಗಾಂಧಿಯವರು ಡಬ್ಬಿಯ ಬಾಗಿಲ ಬಳಿ ಬಂದು ನಿಂತರು. ಮುಗುಳ್ನಗೆ ಸೂಸುತ್ತ ಆ ಅಮಾಯಕ ಯುವಕರನ್ನು ಸ್ವಾಗತಿಸಿದರು. ಯುವಕರು ತಲೆಬಾಗಿ ಗಾಂಧಿಯವರ ಪಾದಗಳಿಗೆ ವಂದಿಸಿದರು, ಯುವಕರು "ಮಹಾತ್ಮರೇ, ಆ ದಿನ ನಾವು ಅಜ್ಞಾನದಿಂದ, ಶಿಷ್ಟಾಚಾರ ಮೀರಿ ನಡೆದುಕೊಂಡೆವು. ಅದಕ್ಕಾಗಿ ಪಶ್ಚಾತ್ತಾಪ ಪಟ್ಟು ದುಃಖಪಡುತ್ತಿದ್ದೇವೆ, ಅವಮಾನಿತರಾಗಿದ್ದೇವೆ ನಮ್ಮನ್ನು ಮನ್ನಿಸಿ" ಎಂದರು.

ಗಾಂಧೀಜಿ ಅವರನ್ನು ಸಮಾಧಾನಪಡಿಸುತ "ಅಂದು ನಡೆದುದ್ದನ್ನೆಲ್ಲ

ಮರೆತುಬಿಡೋಣ" ಎಂದರು.

ಯುವಕರು "ಅಂದು ನೀವು ಕೊಂಚವೂ ವಿಚಲಿತರಾಗದೆ, ಕೋಪಗೊಳ್ಳದೆ ನಮ್ಮ ಉದ್ಧಟತನವನ್ನು ಕ್ಷಮಿಸಿಬಿಟ್ಟಿರಿ. ಆದ್ದರಿಂದ ನಮ್ಮ ಮನಸ್ಸು ಸಂಪೂರ್ಣವಾಗಿ ಪರಿವರ್ತನೆಗೊಂಡಿದೆ. ಎಂದು ಆ ಯುವಕರು ಉತ್ತರಿಸಿದರು.

ಗಾಂಧಿಯವರು ಗದ್ಗದಿತರಾಗಿ "ತನ್ನ ಅಮಾಯಕ ಮಕ್ಕಳ ಮೇಲೆ ತಾಯಿ ಹೇಗೆ ತಾನೇ ಸಿಟ್ಟಾದಾಳು. ಕೋಪಿಸಿಕೊಂಡರೂ ಸಹ ಈ ಬಡಕಲು, ಬಲಹೀನ ಮುದುಕ ನಿಮ್ಮನ್ನು ಏನು ತಾನೆ ಮಾಡಬಲ್ಲ?"ಎಂದರು.

"ಹಾಗೆನ್ನಬೇಡಿ ಬಾಪೂ, ನಮ್ಮಿಂದ ಅಕ್ಷಮ್ಯ ಅಪರಾಧ ಆಗಿಬಿಟ್ಟಿದೆ. ಅದಕ್ಕಾಗಿ ನಿಮ್ಮಲ್ಲಿ ಕ್ಷಮೆ ಯಾಚಿಸಲು ಬಂದಿದ್ದೇವೆ. ದಯಮಾಡಿ ನಮ್ಮನ್ನು ಕ್ಷಮಿಸಿರಿ, ಹರಸಿರಿ" ಎಂದು ಬೇಡಿದರು ಯುವಕರು.

"ನಿಮಗೆ ನಿಜವಾಗಿಯೂ ಪಶ್ಚಾತ್ತಾಪ ಆಗಿರುವುದಾದರೆ ಇನ್ನು ಮುಂದೆ ಯಾವಾಗಲೂ "ನೀವ್ಯಾರೂ ನನ್ನಂತಹ ಬಡವನೂ, ನಿರ್ದೋಷಿಯೂ ಆದ ಮುದುಕರನ್ನು ಈ ರೀತಿ ಸತಾಯಿಸಬೇಡಿ, ನಿಮ್ಮ ವಿದ್ಯೆ, ಬುದ್ಧಿ, ಶಕ್ತಿಗಳನ್ನು ಬಡವರ, ದೀನ-ದಲಿತರ ಸೇವೆಯಲ್ಲಿ ವಿನಿಯೋಗಿಸಿ. ಈಗ ಭಾರತಕ್ಕೆ ಸಿಗುತ್ತಿರುವ ಸ್ವಾತಂತ್ರ್ಯದಲ್ಲಿ ಸೇವಾ ಮನೋಭಾವವುಳ್ಳ ಯುವಜನಾಂಗದ ಅಗತ್ಯ ತುಂಬಾ ಇದೆ. ನಿಮ್ಮಂತಹ ನವಯುವಕರು ದೇಶಸೇವೆಯಲ್ಲಿ ತೊಡಗಿದರೆ ಮಾತ್ರ ಇಷ್ಟು ಕಷ್ಟ ಪಟ್ಟುಗಳಿಸಿದ ಸ್ವಾತಂತ್ರ್ಯ ಉಳಿದೀತು. ಅಂತಹ ಯುವಶಕ್ತಿಯ ಮೇಲೆ ನಿಂತ ಸ್ವರಾಜ್ಯ ಸುರಾಜ್ಯ ಆಗುತ್ತದೆ. ಹಾಗಾದಾಗ ಮಾತ್ರ ಜನಸಾಮಾನ್ಯರಿಗೆ ಸ್ವರಾಜ್ಯದ ಸವಿರುಚಿ ಸಿಕ್ಕುತ್ತದೆ" ಎಂದರು ಗಾಂಧೀ.

ಆ ಯುವಸಮೂಹ ಗಾಂಧೀಯವರ ಮಾತುಗಳನ್ನು ಶ್ರದ್ಧಾಭಕ್ತಿಗಳಿಂದ ಕೇಳಿತು. ಯುವ ಮುಂದಾಳು ಹರಿಜನ ಸೇವಾ ನಿಧಿಗಾಗಿ ಒಂದು ಕೈಚೀಲದಲ್ಲಿ ತುಂಬಿದ್ದ ಕಾಣಿಕೆಹಣವನ್ನು ಗಾಂಧೀಜಿಯವರ ಕೈಗಿತ್ತು ವಂದಿಸಿದನು. ಅಷ್ಟರಲ್ಲಿ ಗಾರ್ಡ್ ಸೀಟಿ ಊದಿದ, ಹಸಿರು ನಿಶಾನೆ ಬೀಸಿದ, ರೈಲು ಹೊರಟಿತು.

ಗಾಂಧೀ ಎರಡು ಕೈಗಳನ್ನೂ ಮೇಲೆತ್ತಿ ಯುವಕರನ್ನು ಆಶೀರ್ವದಿಸುತ್ತ ನಿಂತಿದ್ದರು. ಗಾಡಿಯ ಬಾಗಿಲಲ್ಲಿ ದೂರದಲ್ಲಿ ರೈಲು ಕಣ್ಮರೆ ಆಗುವವರೆಗೂ ಯುವಕರು ಕೈ ಮುಗಿದು ರೈಲನ್ನು ನೋಡುತ್ತಲೇ ನಿಂತಿದ್ದರು.

'ಆಹಿಂಸಾ ಕಾ ಏಕಾಕೀ ಪಥಿಕ್' ಪುಸ್ತಕ ಸಾಭಾರ

***

ನೀರಿನ ಹಕ್ಕಿಗಾಗಿ ಸತ್ಯಾಗ್ರಹ ನಡೆಯಲಿ

- ರಾಜೇಂದ್ರ ಸಿಂಹ

ಇಂದಿನ ಜ್ವಲಂತ ಸಮಸ್ಯೆ ನೀರು ಯಾರದು ಎಂಬುದಾಗಿದೆ. ನಮ್ಮ ಶರೀರದಲ್ಲಿ ನೀರು ಶೇ ನೂರಕ್ಕೆ ಎಪ್ಪತ್ತರಷ್ಟಿದೆ. ಯಾವುದೇ ಒಬ್ಬ ವ್ಯಕ್ತಿ ಎಲ್ಲರ ಜೀವನದ ಆಧಾರವಾದ ನೀರಿನ ಒಡೆಯನಾಗಲು ಸಾಧ್ಯವಿಲ್ಲ, ದಿನಾಂಕ ೧-೦೪-೨೦೦೨ ರಿಂದ ಸರ್ಕಾರವು ಹೊಸ ಜಲನೀತಿಯನ್ನು ರೂಪಿಸಿತು. ಅಂದಿನಿಂದ ನೀರಿನ ಒಡೆತನದ ಖಾಸಗೀಕರಣ ಪ್ರಾರಂಭವಾಯಿತು. ಆದರೆ ನೀರು ಇರುವುದಾದರೂ ಎಲ್ಲಿ? ಹಳ್ಳಿಗೆ ಹಳ್ಳಿಯೇ ಒಣಗುತ್ತಾ ಹೋಗುತ್ತಿವೆ. ಇಪ್ಪತ್ತೈದು ವರ್ಷಗಳ ಹಿಂದೆ ಗೋಪಾಲಪುರ ಎಂಬ ಹಳ್ಳಿಯ ಒಬ್ಬ ಅಶಿಕ್ಷಿತ ವ್ಯಕ್ತಿ ಹೇಳಿದ "ಸುಶಿಕ್ಷಿತ ಜನರೇ ಹಳ್ಳಿಗೆ ಹಾನಿಯನ್ನುಂಟುಮಾಡಿದ್ದಾರೆ!" ಹಳ್ಳದಲ್ಲಿ ನೀರು ಇರುವವರೆಗೂ ಹಳ್ಳಿಯಲ್ಲಿ ನೀರಿತ್ತು. ನಾಲ್ಕು ವರ್ಷದವರೆಗೆ ನಾನೊಬ್ಬನೆ ಹಳ್ಳಕ್ಕೆ ಕಟ್ಟೆಹಾಕುವ ಕೆಲಸ ಮಾಡುತ್ತಿದ್ದೆ. ಏನೂ ತಿಳುವಳಿಕೆ ಇರಲಿಲ್ಲ. ಲಾಭವೆ ನಷ್ಟವೆ ಎಂದೂ ಯೋಚನೆ ಮಾಡಲಿಲ್ಲ. ಹಳ್ಳಿಯ ಜನರ ಮಾತಿನ ಮೇಲೆ ವಿಶ್ವಾಸವಿತ್ತು. ಕೊನೆಗೆ ನಾಲ್ಕು ವರ್ಷಗಳ ನಂತರ ಕಟ್ಟೆಯು ನೀರಿನಿಂದ ತುಂಬಿತು ಮತ್ತು ನೋಡುತ್ತಾ ನೋಡುತ್ತಾ ಹಳ್ಳಿಯ ಕೆಲ ಬಾವಿಗಳು ನೀರಿನಿಂದ ತುಂಬಿದವು! ಹಳ್ಳಿಯ ಯುವಕರು ನಗರಕ್ಕೆ ಹೊರಟು ಹೋಗಿದ್ದರು. ಹಸುಗಳೇ ಇರಲಿಲ್ಲ. ಕೇವಲ ಕುರಿಗಳು ಉಳಿದಿದ್ದವು. ನೀರು ಬಂತು, ಜನರೂ ಬಂದರು. ಇದು ಹೇಗೆ ಸಾಧ್ಯವಾಯಿತೆಂದು ನನ್ನನ್ನು ಕೇಳಲು ಆರಂಭಿಸಿದರು. ಆಗ ನಾನು ಹೇಳಿದೆ, "ಮಾಂಗೂ ಚಿಕ್ಕಪ್ಪನನ್ನು ಕೇಳಿ". ಅವರು ಅಕ್ಕ ಪಕ್ಕದ ಎಲ್ಲ ನೆಂಟರಿಷ್ಟರನ್ನು ಕರೆದರು. ನೂರೈವತ್ತು ಜನರು ಬಂದರು. ಅದರಲ್ಲಿ ಐದು ಪ್ರಕಾರದ ಜನರಿದ್ದರು. ಒಂದು, ಕಾಲೆಳೆಯುವವರು- ಇವರು ದುರ್ಜನಶಕ್ತಿಯ ಪ್ರತೀಕವಾಗಿರುತ್ತಾರೆ. ಇಂಥವರು ಕೆಲವರು ಮಾತ್ರ. ಎರಡನೆಯದು, ಸಮಯ ಸಾಧಕರು- ಇಂಥವರು ಹೆಚ್ಚಾಗಿರುತ್ತಾರೆ. ಮೂರು ಸಜ್ಜನಶಕ್ತಿ. ಇವರು ಎಲ್ಲರ ಒಳಿತನ್ನು ಬಯಸುತ್ತಾರೆ. ಆದರೆ ಸ್ವತಃ ಏನನ್ನು ಮಾಡುವುದಿಲ್ಲ, ಸಂಘಟಿತರಾಗುವುದಿಲ್ಲ. ಇವರಲ್ಲಿ ಶಕ್ತಿ ಸುಪ್ತವಾಗಿರುತ್ತದೆ. ಇಂಥವರು ಬಹಳಷ್ಟು ಜನವಿರುತ್ತಾರೆ. ನಾಲ್ಕು, ಪ್ರೇರಕಶಕ್ತಿ. ಪ್ರತಿ ಹಳ್ಳಿಯಲ್ಲಿಯೂ ಕೆಲಸಕ್ಕೆ ಪ್ರೇರಣೆ ಕೊಡುವಂಥ ಕೆಲ ಒಳ್ಳೆಯ ಜನ ಇದ್ದೇ ಇರುತ್ತಾರೆ. ಐದನೆಯವರು ಬೆರಳುಗಳಲ್ಲಿರುವಂಥ ಮೂಲಭೂತ ಶಕ್ತಿ. ಇದು ಅವ್ಯಕ್ತವಾಗಿರುತ್ತದೆ.

ಒಂದು ವೇಳೆ ಬೆರಳುಗಳೊಂದಿಗೆ ದುರ್ಜನರು ಸೇರಿಕೊಂಡರೆ ಕೆಲಸವಾಗುವುದಿಲ್ಲ. ಪ್ರೇರಕ ಮತ್ತು ಮೂಲಭೂತ ಶಕ್ತಿಗಳಾದ ನಾಲ್ಕು ಮತ್ತು ಐದನೆಯದು ಒಟ್ಟಿಗೆ ಸೇರಿದರೆ ಕೆಲಸವಾಗುವುದು. ಆಗ ಸಜ್ಜನ ಶಕ್ತಿ ಕೂಡ ದೊರೆಯುವುದು. ಕುಂಭ ಜಾತ್ರೆ ಎಲ್ಲರನ್ನೂ ಜೋಡಿಸುವ ಸಂಸ್ಕೃತಿಯಾಗಿತ್ತು. ನಾವು ಈ ಐದು ಪ್ರಕಾರದ ಶಕ್ತಿಗಳನ್ನು ಸೇರಿಸಿದರೆ ಕೆಲಸವಾದಂತೆಯೆ. ದುರ್ಜನಶಕ್ತಿಯ ಬಗ್ಗೆ ಎಂದೂ ಯೋಚನೆ ಮಾಡಿರಲಿಲ್ಲ. ಅನುಭವದ ಮೂಲಕ

ಅವರ ಪರಿವರ್ತನೆಯಾಗುವುದೆಂದು ನಾನು ಭಾವಿಸಿದೆ. ಸಜ್ಜನಶಕ್ತಿಗೆ ನಾನು ಪ್ರೋತ್ಸಾಹವನ್ನು ಕೊಟ್ಟೆ, ಚಿಕ್ಕ ಪುಟ್ಟ ಕೆಲಸವನ್ನು ಮಾಡಿದೆ. ೧೯೮೮ರಲ್ಲಿ ಮೊದಲ ಕೆಲಸ ಪ್ರಾರಂಭವಾಯಿತು. ೧೯೯೮ರ ವೇಳೆಗೆ ಬರಪೀಡಿತವಾಗಿದ್ದ ಈ ಕ್ಷೇತ್ರವು ಸಮೃದ್ಧಿಯುಳ್ಳದ್ದಾಯಿತು. ಅಂತರ್ಜಲ ಮತ್ತು ಭೂಮಿಯ ಮೇಲಿನ ಜಲವೂ ದೊರೆಯುತ್ತಾ ಹೋಯಿತು.

ನೀರಿನದೊಂದು ವಿಜ್ಞಾನವಿದೆ. ಎಲ್ಲರೂ ಶಿಸ್ತನ್ನು ಪಾಲಿಸಬೇಕಾಗುತ್ತದೆ. ಗ್ರಾಮಸಭೆ, ಗ್ರಾಮಕೋಶ, ಗ್ರಾಮನೀರು, ಗ್ರಾಮಬೆಳೆ ಇತ್ಯಾದಿಗಳು ಹೆಚ್ಚು ನೀರು ಅಗತ್ಯವಿರುವ ಬೆಳೆಯನ್ನು ಕೈಗೊಳ್ಳದಿರಲಿ. ನೀರಿನ ಉಳಿತಾಯಕ್ಕೆ ಸಂಬಂಧಿಸಿದ ಎಲ್ಲ ಪ್ರಕಾರದ ಕಾನೂನುಗಳನ್ನು ಗ್ರಾಮವಾಸಿಗಳು ಮಾಡಿದರು ಮತ್ತು ಜಾರಿಗೆ ತಂದರು. ಹೆಣ್ಣು ಮಕ್ಕಳು ಕೊಳವೆ ಬಾವಿಗಳನ್ನು ಮುಚ್ಚಿಸಿದರು. ರಚನಾತ್ಮಕ ಕೆಲಸಗಳಲ್ಲಿ ಅಡೆತಡೆಗಳೇನೋ ಬಂದವು. ಆಗ ಸತ್ಯಾಗ್ರಹವನ್ನು ಹೂಡಲಾಯಿತು. ಯಾವನು ರಚನಾ ಕೆಲಸವನ್ನು ಮಾಡಬಲ್ಲನೋ ಅವನೆ ಸತ್ಯಾಗ್ರಹ ಮಾಡಬಲ್ಲ. ಮೀನು ಹಿಡಿಯುವ ಗುತ್ತಿಗೆಯನ್ನು ಸರ್ಕಾರ ಕೊಟ್ಟಿತು. ಗ್ರಾಮವಾಸಿಗಳು ಆ ಗುತ್ತಿಗೆಯನ್ನು ರದ್ದುಮಾಡಿಸಿದರು. ನಿಧಾನ ನಿಧಾನವಾಗಿ ಇಡೀ ನದಿಯ ಸಂಘಟನೆ ಉಂಟಾಯಿತು. ನೀರು–ಅರಣ್ಯ–ಭೂಮಿ ಗ್ರಾಮದ ವ್ಯವಸ್ಥೆಗೆ ಒಳಪಟ್ಟವು. ಮಹಿಳೆಯರು ಮುಂದೆ ಬಂದರು. ಆಗ ಸಮಾಜದ ಸುಧಾರಣೆ ತನ್ನಷ್ಟಕ್ಕೆ ತಾನೆ ಆಗಲು ಪ್ರಾರಂಭಿಸಿತು. ಹಳ್ಳಿಯ ನಿರ್ಣಯಗಳಲ್ಲಿ ಮಹಿಳೆಯರನ್ನು ಸೇರಿಸಿಕೊಳ್ಳಬೇಕು. ಈಗ ಅಲ್ಲಿ ೧೪೨ ಜನರಲ್ಲಿ ೭೨ ಮಹಿಳಾ ಸದಸ್ಯಣಿಯರಿದ್ದಾರೆ. ಅವಕಾಶ ದೊರೆತೊಡನೆ ಮಹಿಳೆಯರು ಮುಂದೆ ಬಂದರು.

ಸರ್ಕಾರವನ್ನು ವಿರೋಧಿಸುವುದಾಗಿದ್ದರೆ ನಮ್ಮ ಪರಿಸರದಲ್ಲಿಯೆ ಪ್ರಾರಂಭಿಸಬೇಕು. ಮನೆಯಲ್ಲಿಯೆ ರಚನಾತ್ಮಕ ಕೆಲಸ ಮಾಡಿದರೆ ಪ್ರಪಂಚದ ಚಿಂತೆಯನ್ನು ಆನಂತರ ಮಾಡಲು ಸಾಧ್ಯವಾಗುತ್ತದೆ. ನಾನು ನನ್ನ ಊರಿನಲ್ಲಿ ನೀರನ್ನು ಖರೀದಿಸುವುದಿಲ್ಲ. ಇಂದು ವಿಶ್ವದಲ್ಲಿ ನೀರನ್ನು ಖರೀದಿಸುವ ಸನ್ನಾಹವೆ ನಡೆದಿದೆ. ಮತ್ತು ನೀರಿನ ಕಳ್ಳರ ಕೂಟವೆ ಸೃಷ್ಟಿಯಾಗಿದೆ. ಅಭಿವೃದ್ಧಿಯ ನೆಪದಲ್ಲಿ ವಿನಾಶಮಾಡುವಂಥವರಿವರು. ಸಂಯುಕ್ತ ರಾಷ್ಟ್ರ ಸಂಘದ ಜೊತೆ ಸೇರಿ ಏನೆಲ್ಲ ಉಪಾಯಗಳನ್ನು ಇವರು ಹೇಳುತ್ತಾರೊ ಅದೆಲ್ಲದರ ಅರ್ಥ ನೀರಿನ ಗುಲಾಮಗಿರಿಯೆ ಆಗುತ್ತದೆ. ಇತ್ತೀಚಿನ ದಿನಗಳಲ್ಲಿ "ಸಹಭಾಗಿತ್ವದ ನೀರು ವ್ಯವಸ್ಥೆ"ಎಂಬ ಹೆಸರಿನಲ್ಲೆ ನೀರಿನ ಸಂಪತ್ತನ್ನು ಮಾರಾಟ ಮಾಡಲಾಗುತ್ತಿದೆ. BOOT ಹಣಕೊಟ್ಟು ನದಿಯನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುತ್ತದೆ ಮತ್ತು ಮಾರುತ್ತಿದೆ.

B-Build, O-Operation, O-owning, T-Transfer

ಈ ನಿಯಮಾವಳಿಯ ಪ್ರಕಾರ ನದಿಯನ್ನು ಜೋಡಿಸುವುದರಿಂದ ಪ್ರವಾಹ ನಿಲ್ಲುತ್ತದೆ, ಎಲ್ಲರಿಗೂ ನೀರು ದೊರೆಯುತ್ತದೆ, ದೋಣಿ ಸಾಗಾಣಿಕೆಯಾಗುತ್ತದೆ ಎಂಬೆಲ್ಲ ಮಾತುಗಳು ಸುಳ್ಳು. ಹಳ್ಳಿಯ ಶಕ್ತಿಯಿಂದ ನದಿ ಜೀವಂತವಾಗಿರುತ್ತದೆಯೇ ಹೊರತು ನದಿಯನ್ನು ಜೋಡಿಸುವುದರಿಂದಲ್ಲ. ಈ ಯೋಜನೆಯಲ್ಲಿ ಭ್ರಷ್ಟಾಚಾರ ಮತ್ತು ಲಂಚಾಚಾರದ ಕೂಟವಿದೆ. ನದಿ ಸಂಬಂಧಿ

ಜಗಳಗಳನ್ನು ಯಾವುದೇ ನ್ಯಾಯಾಸ್ಥಾನ ಬಗೆಹರಿಸಲು ಸಾಧ್ಯವಿಲ್ಲ. ನ್ಯಾಯಾಲಯದ ಬಳಿ ಪರಿಸರ ಹಕ್ಕುಗಳ ಬಗ್ಗೆ ಯಾವ ಉತ್ತರವೂ ಇಲ್ಲ. ಇದಕ್ಕಾಗಿ ಹೊಸ ಪ್ರಕಾರದ ನ್ಯಾಯಸ್ಥಾನವನ್ನೇ ಮಾಡಬೇಕಾಗುತ್ತದೆ. ಇಂದು ೫೬೦೦೦೦ ಕೋಟಿ ಹಣವನ್ನು ನದಿಗಳನ್ನು ಜೋಡಿಸುವ ಸಲುವಾಗಿ ಸಾಲವನ್ನು ಪಡೆಯಲಾಗುತ್ತಿದೆ. ಈ ಸಾಲವನ್ನು ತೀರಿಸುವ ಬಗೆ ಹೇಗೆ? ಆಗ ಉಪಾಯವಿಲ್ಲದೆ ನೀರನ್ನು ಮಾರಬೇಕಾಗುತ್ತದೆ. ಇಂದು ಉಚ್ಚನ್ಯಾಯಾಲಯದಲ್ಲಿ ಎಂಭತ್ತು ಜಲ ವಿವಾದಗಳಿವೆ. ಅವು ಇಪ್ಪತ್ತು ವರ್ಷಗಳಾದರೂ ತೀರ್ಮಾನವಾಗುವ ಸಾಧ್ಯತೆಯಿಲ್ಲ.

ಹಳೆ ಕಾಲದಲ್ಲಿ ನೀರಿನ ಲೂಟಿ, ಮಾರಾಟ ಆಗುತ್ತಿರಲಿಲ್ಲ. ಇಂದು ನೀರು ಎಲ್ಲಕ್ಕಿಂತ ಹೆಚ್ಚಾಗಿ ಗುಲಾಮತನಕ್ಕೆ ದಾರಿಯಾಗಿದೆ. ಗಾಂಧೀ ಈ ಯೋಜನೆಯನ್ನು ವಿರೋಧಮಾಡಲು ಹೇಳುತ್ತಿದ್ದರು. ನಮ್ಮ ಹಳ್ಳಿ ಮತ್ತು ಮನೆಗಳಲ್ಲಿ ನೀರನ್ನು ಮಿತವ್ಯಯವಾಗಿ ಉಪಯೋಗಿಸಬೇಕೆಂದು ಹೇಳತ್ತಾ ಪ್ರಕೃತಿಯು ಪ್ರತಿಯೊಬ್ಬರ ಅವಶ್ಯಕತೆಗಳನ್ನು ಪೂರೈಸಬಲ್ಲದು ಆದರೆ ಒಬ್ಬನ ದುರಾಸೆಯನ್ನು ಅದು ಪೂರೈಸಲಾರದು. ಈ ಲೂಟಿಗಾರರ ವಿರುದ್ಧ ಸತ್ಯಾಗ್ರಹ ಮಾಡಿರಿ. ಎಲ್ಲರೂ ಸಂಘಟಿತರಾಗಿರಿ ಎಂದು ಹೇಳುತ್ತಿದ್ದರು.

ನೀರು ಸಂಪತ್ತಲ್ಲವೆ? ಮನುಷ್ಯ ಒಂದು ಸಾಧನ ಮಾತ್ರ. ನೀರು ಜೀವನದ ಆಧಾರ. ಅದನ್ನೇಕೆ ಮಾರಾಟಮಾಡಲು ಅವಕಾಶ ಕೊಡಬೇಕು? ದೊಡ್ಡ ಕಂಪನಿಗಳು, ಕಾರ್ಖಾನೆಗಳು ತಮ್ಮ ಉಪಯೋಗಕ್ಕಾಗಿ ೧೬೦೦ ಮೀ. ಗಳಿಗಿಂತಲೂ ಆಳದಿಂದ ನೀರನ್ನು ಪಡೆಯುತ್ತವೆ. ಭೂಮಿಯ ಮೇಲಿರುವ ನೀರಿನ ಜೊತೆಗೆ ಒಳಗಿರುವ ನೀರನ್ನೂ ಸಹ ಸಂಗ್ರಹಿಸಿಕೊಳ್ಳುತ್ತಿವೆ. ನಾವು ಈ ಕಂಪನಿಗಳ ನೀರನ್ನು ಖರೀದಿಸಬಾರದು. ಇವುಗಳು ತಯಾರಿಸಿದ ಪದಾರ್ಥಗಳನ್ನೂ ಖರೀದಿಸಬಾರದು. ಇಂಥ ಕಂಪನಿಗಳನ್ನು ನಮ್ಮ ಹಳ್ಳಿಗಳಿಂದ ಓಡಿಸಬೇಕು. ಈ ಬಹುರಾಷ್ಟ್ರೀಯ ಕಂಪನಿಗಳು ದೇಶಕ್ಕೆ ಯಾವ ತೆರಿಗೆಯನ್ನೂ ಕೊಡುವುದಿಲ್ಲ. ಸರ್ವೋದಯ ವಿಚಾರದ ಜನರು ಮತ್ತು ಸರ್ವ ಸೇವಾ ಸಂಘ ಎಲ್ಲರೂ ಸೇರಿ ಈ ಕೆಲಸವನ್ನು ಕೈಗೆತ್ತಿಕೊಳ್ಳಬೇಕು.

"ಭೂಮಿಯೆಲ್ಲವು ಗೋಪಾಲನದು" ಎಂಬುದಾಗಿ ವಿನೋಬಾ ಹೇಳಿದ್ದರು. ಆದರೆ ಆ ಮಾತು ಇಂದು ನಡೆಯುತ್ತಿಲ್ಲ. ಇಂದು ಕೂಡ ಎಲ್ಲ ನೀರು ಸಮಾಜದ್ದಾಗಲು ಸಾಧ್ಯವಿದೆ. ನಾವು ಎಚ್ಚರವಿರಬೇಕಷ್ಟೆ. ಇಂದು ಎಲ್ಲ ರಾಜಕೀಯ ಪಕ್ಷಗಳೂ ವಿದೇಶಗಳ ಗುಲಾಮವಾಗಿವೆ. ಈಗ ಪರಿಸರಕ್ಕೆ ಸಂಬಂಧಿಸಿದ ನೀತಿಯನ್ನು ರೂಪಿಸಲಾಗುತ್ತಿದೆ. ಪರಿಸರವನ್ನು ಹಾಳುಮಾಡುವಂಥವರಿಗೆ ದಂಡವನ್ನು ಹಾಕಬೇಕೆಂಬ ನಿಯಮ ಅಲ್ಲಿರಬೇಕು ಬಂಡವಾಳ ಹೂಡಿಕೆದಾರರ ರಕ್ಷಣಾ ನೀತಿಯ ಬದಲಿಗೆ ಜನರ ಸಂರಕ್ಷಣಾ ನೀತಿ ಜಾರಿಗೆ ಬರಬೇಕು. ಪರಿಸರವನ್ನು ಮೊದಲು ಹಾಳುಮಾಡಲಾಗುತ್ತದೆ. ನಂತರ ಹಣ ಕೊಟ್ಟು ತಮ್ಮನ್ನು ರಕ್ಷಿಸಿಕೊಳ್ಳತ್ತಾರೆ. ಬೆಟ್ಟದ ಮೇಲಿಂದ ಹರಿದು ಬರುವ ನೀರು ಸಂಗ್ರಹವಾಗುವ ಪ್ರದೇಶವೂ ಕೂಡ ಕೈ ತಪ್ಪಿ ಹೋಗುತ್ತಿದೆ. ಆದ್ದರಿಂದ ನೀರಿಗಾಗಿ ಹೋರಾಟ ಎಂಬ ಉದ್ದೇಶ ಹುಟ್ಟಿಕೊಳ್ಳಲಿ. ಅಮೇರಿಕಾದಲ್ಲಿ ಖಾಸಗೀಕರಣದ ವಿರುದ್ಧ

ಇಂಥ ಮೂವತ್ತು ಚಳುವಳಿಗಳು ನಡೆಯುತ್ತಿವೆ.

ವಿಶ್ವ ಬ್ಯಾಂಕಿನ ಲೆಕ್ಕಾಚಾರದ ಪ್ರಕಾರ ವಿಶ್ವದಲ್ಲಿ ಶೇ೧೦೦ಕ್ಕೆ ೩೦ರಷ್ಟು ಜನರಿಗೆ ಬದುಕುವ ಅನೇಕ ಸಾಧನಗಳಿವೆ. ಆದ್ದರಿಂದ ೭೦ರಷ್ಟು ಜನರ ಚಿಂತೆಯನ್ನು ಮಾಡಬೇಕಾಗಿದೆ. ನೀರು ಐದು ಮಹಾ ಭೂತಗಳ ಆಧಾರವಾಗಿದೆ.

ಜ=ಜಲ-ಜೀವನ ಲ=ನಾಲ್ಕು ಮಹಾಭೂತಗಳು

ನೀರಿನ ಉಳಿತಾಯವನ್ನು ನಮ್ಮ ಜೀವನದಿಂದಲೇ ಪ್ರಾರಂಭಿಸಬೇಕು. ವಿಷಯವನ್ನು ತಿಳಿದುಕೊಂಡು ನೀರಿನ ಉಳಿತಾಯ ಮಾಡಲು ಪ್ರಾರಂಭಿಸಬೇಕು. ತಿಳುವಳಿಕೆಯಿಂದ ಶಕ್ತಿ ಬರುತ್ತದೆ. ಆಗ ರಚನಾಕಾರ್ಯ ನಡೆಯುತ್ತದೆ. ರಚನಾಕಾರ್ಯದಲ್ಲಿ ತಡೆಯುಂಟಾದರೆ ಸತ್ಯಾಗ್ರಹವನ್ನು ಪ್ರಾರಂಭಿಸಬೇಕು. ನಾವು ಮತ್ತು ನಮ್ಮ ಹಳ್ಳಿಯ ಜನರು ಇದನ್ನು ಮಾಡಿದ್ದೇವೆ. ನೀವೆಲ್ಲರೂ ಇದನ್ನು ಮಾಡಬಹುದು. ನಮ್ಮ ಜೀವನವು ಪರಸ್ಪರಾವಲಂಬನೆಯಿಂದಲೇ ನಡೆಯುತ್ತದೆ.

ಹಿಂದಿಯಿಂದ ಅನು:- ಸು.ಕೌ

ಸಂತಾಪ



ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಪ್ರತಿಪಾದಿಸಿರುವ ಸ್ವಧರ್ಮವನ್ನು ಅರ್ಥಶಃ ಪಾಲಿಸಿದ ರಂಗಭೂಮಿಯ ವರನಟ ಡಾ॥ರಾಜ್‌ಕುಮಾರ್ ರವರು ದಿನಾಂಕ: ೧೨-೪-೨೦೦೬ ರಂದು ಶ್ರೀ ವಿಷ್ಣುಪಾದ ಸೇರಿದ್ದಕ್ಕಾಗಿ ಜನಪದ ವಿಚಾರ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.


***

ಕರ್ನಾಟಕದ ಹಿರಿಯ ಸರ್ವೋದಯ ನಾಯಕರಾಗಿದ್ದ ಮತ್ತು ಹಲವಾರು ಚಳುವಳಿಗಳಲ್ಲಿ ಭಾಗವಹಿಸಿದ್ದ ಶ್ರೀ ಪಿ.ವೆಂಕೋಬರಾವ್‌ರವರು ತಮ್ಮ ಎಂಬತ್ತನಾಲ್ಕನೇ ವಯಸ್ಸಿನಲ್ಲಿ ದೈವಾಧೀನರಾದುದಕ್ಕಾಗಿ ಜನಪದ ವಿಚಾರವು ತನ್ನ ಆತ್ಮೀಯ ಸಂತಾಪವನ್ನು ವ್ಯಕ್ತ ಪಡಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ..................೩೦

-ಸುರೇಂದ್ರ ಕೌಲಗಿ

ಸಂಭಾವಿತಸ್ಯ ಚಾಕೀರ್ತಿರ್ಮರಣಾದತಿರಿಚ್ಯತೇ. ೨.೩೪ ಗೀತೆ
ಸಂಭಾವಿತನಿಗೆ ಅಪಕೀರ್ತಿ ಮರಣಕ್ಕಿಂತ ಹೆಚ್ಚು ಕೆಟ್ಟದು.



ವಿದ್ಯಾರ್ಥಿ ದೆಸೆಯಿಂದಲೂ ನನಗೆ ರಾಷ್ಟ್ರೀಯ ಸೇವಾ ದಳದತ್ತ ಒಲವಿತ್ತು. ೧೯೪೨ ರಲ್ಲಿ ನಾನು ಬೆಳಗಾವಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಸ್ವಾತಂತ್ರ್ಯ ಚಳುವಳಿ ತನ್ನ ಪರಾಕಾಷ್ಠತೆಯನ್ನು ಮುಟ್ಟಿತ್ತು. ಇಡೀ ದೇಶದ ಜನತೆ ಗಾಂಧಿಯವರ ನೇತೃತ್ವದ ಚಳುವಳಿಯಿಂದ ಪ್ರಭಾವಿತವಾಗಿತ್ತು. ಪ್ರತಿಯೊಬ್ಬ ಭಾರತೀಯನು ಚಿಕ್ಕವನಿರಲಿ, ದೊಡ್ಡವನಿರಲಿ, ಹೆಂಗಸಿರಲಿ, ಗಂಡಸಿರಲಿ, ಹಳ್ಳಿಯವನಿರಲಿ, ಪಟ್ಟಣದವನಿರಲಿ, ಪ್ರತಿಯೊಬ್ಬನೂ ಗಾಂಧಿಯ ಹೆಸರನ್ನು ಕೇಳಿದ್ದ. ಒಂದಿಲ್ಲ ಒಂದು ರೀತಿಯ ಗಾಂಧಿಯವರ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದ. ದಿನಬೆಳಗಾದರೆ ಪತ್ರಿಕೆಗಳು ಗಾಂಧಿಯವರ ಚಿತ್ರವನ್ನು ಮುಖಪುಟದಲ್ಲಿ ಹೊತ್ತುಕೊಂಡು ಚಳುವಳಿಯ ಸುದ್ದಿಯೊಂದಿಗೆ ಪ್ರಕಟವಾಗುತ್ತಿದ್ದವು. ಹೀಗಾಗಿ ಗಾಂಧಿಯವರನ್ನು ಪ್ರತ್ಯಕ್ಷವಾಗಿ ನೋಡದೆ ಇದ್ದವರೂ ಸಹ ಪತ್ರಿಕೆಗಳಲ್ಲಿ ಪ್ರಕಟವಾಗುವ ಗಾಂಧಿಯವರ ಚಿತ್ರದಿಂದಾದರೂ ಅವರ ವ್ಯಕ್ತಿತ್ವವನ್ನು ತಿಳಿದಂತಾವರಾಗಿದ್ದರು. ಬೆಳಗಾವಿ ನಗರವು ಜಿಲ್ಲಾ ಕೇಂದ್ರವಾಗಿತ್ತಲ್ಲದೆ, ನೇರವಾಗಿ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿದ್ದ ಬಾಂಬೆ ಪ್ರಾವಿನ್ಸ್‌ಗೆ ಒಳಪಟ್ಟಿತ್ತು. ಆಗಾಗ್ಗೆ ಮರವಣಿಗೆಗಳು, ರಾಷ್ಟ್ರನಾಯಕರ ಸಭೆಗಳು ನಡೆಯುತ್ತಿದ್ದವು. ಅಲ್ಲಿಗೆ ಜನ, ಮಕ್ಕಳು, ಹೆಣ್ಣುಮಕ್ಕಳಾದಿಯಾಗಿ ರಾಷ್ಟ್ರಧ್ವಜವನ್ನು ಕೈಯಲ್ಲಿ ಹಿಡಿದುಕೊಂಡು ರಾಷ್ಟ್ರನಾಯಕರಿಗೆ ಮತ್ತು ಭಾರತಮಾತೆಗೆ ಜೈಕಾರ ಕೂಗುತ್ತಾ ಮೂರು ಮೂರು ಜನರ ಸಾಲಿನಲ್ಲಿ ದೊಡ್ಡ ಮೆರವಣಿಗೆಯಲ್ಲಿ ಹೋಗುತ್ತಿದುದು ಸಾಮಾನ್ಯ ದೃಶ್ಯವಾಗಿರುತ್ತಿತ್ತು. ಇಂಥ ಅನೇಕ ಮರವಣಿಗೆಗಳಲ್ಲಿ ನಾನೂ ಸಹ ಭಾಗವಹಿಸುತ್ತಿದ್ದೆ. ಟಿಳಕವಾಡಿಯಿಂದ ಬೆಳಗಾವಿಯ ರೈಲ್ವೆ ನಿಲ್ದಾಣದ ಎದುರಿದ್ದ ಮೈದಾನಕ್ಕೆ ಹೋಗುತ್ತಿದ್ದೆವು. ಹಾಗೆ ಹೋಗುವಾಗ ಪೋಲೀಸರೇನಾದರೂ ತಮ್ಮ ವ್ಯಾನುಗಳಲ್ಲಿ ಬಂದು ಇಳಿಯುತ್ತಿದ್ದಂತೆಯೆ ಮೆರವಣಿಗೆಯಲ್ಲಿದ್ದ ಕೆಲವರು ಭೀತಿಯಿಂದ ಚೆಲ್ಲಾಪಿಲ್ಲಿಯಾಗಿ ಓಡುತ್ತಿದ್ದರು. ಕೆಲವೊಮ್ಮೆ ಪೋಲೀಸರಿಂದ ಲಾಠಿ ಪ್ರಹಾರವೂ ಪ್ರಾರಂಭವಾಗುತ್ತಿತ್ತು. ಮೆರವಣಿಗೆಯ ಮಂಚೂಣಿಯಲ್ಲಿ ರಾಷ್ಟ್ರ ಧ್ವಜವನ್ನು ಹಿಡಿದುಕೊಂಡು ನಾಯಕರಾಗಿ ಮುನ್ನಡೆಯುತ್ತಿದ್ದ ಮಹಿಳೆಯರು ಲಾಠಿ ಪ್ರಹಾರಕ್ಕೆ ತುತ್ತಾಗುತ್ತಿದ್ದರು. ರಕ್ತದ ಮಡುವಿನಲ್ಲಿ ಬೀಳುತ್ತಿದ್ದರು. ಆದರೂ ಇನ್ನುಳಿದವರು ಪೋಲೀಸರ ಈ ದಾಳಿಯಿಂದ ತಪ್ಪಿಸಿಕೊಂಡು ಸಭಾ ಸ್ಥಳಕ್ಕೆ ಕಡ್ಡಾಯವಾಗಿ ತಲುಪುತ್ತಿದ್ದರು. ಆ ಸಭಾ ಸ್ಥಳದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿ ನಂತರ ರಾಷ್ಟ್ರನಾಯಕರ ಭಾಷಣವನ್ನು ಪೂರ್ಣವಾಗಿ ಕೇಳಿದ ಮೇಲೆಯೆ ಮನೆಗೆ ಹಿಂದಿರುಗುತ್ತಿದ್ದರು. ಅಷ್ಟು ದೊಡ್ಡವನೂ ಅಲ್ಲದ ಅತಿ ಚಿಕ್ಕವನೂ ಅಲ್ಲದ ನನ್ನಂಥ ಹುಡುಗರು ಈ ಎಲ್ಲ ದೃಶ್ಯವನ್ನು ಆಶ್ಚರ್ಯಕರ ದೃಷ್ಟಿಯಿಂದ ನೋಡುತ್ತಿದ್ದೆವು. ಮತ್ತು ಯಾವುದೊ ಒಂದು ವಿಚಿತ್ರ ಅನುಭವಕ್ಕೆ ತುತ್ತಾಗುತ್ತಿದ್ದೆವು.

ಆದ್ದರಿಂದ ರಾಷ್ಟ್ರೀಯ ಸೇವಾದಳವೆಂದರೆ ನನಗೆ ಮೊದಲಿನಿಂದಲೂ

ಆಕರ್ಷಣೀಯ ವಸ್ತುವಾಗಿತ್ತು. ಇದಕ್ಕೂ ಮೊದಲು ನಾನು ವಿಜಾಪುರದಲ್ಲಿದ್ದಾಗಲೂ ಸಹ ಸೇವಾದಳಕ್ಕೆ ಹೋಗುತ್ತಿದ್ದೆ. ಮತ್ತು ಸೇವಾದಳದ ಹಿರಿಯ ನಾಯಕರು ಬಂಧಿತರಾಗಿ ಹೋದಾಗ ಅವರ ಸ್ಥಳವನ್ನು ಚಿಕ್ಕವರೆ ವಹಿಸಿಕೊಂಡು ಸೇವಾದಳವನ್ನು ನಡೆಸುವುದು ಪರಂಪರೆಯಾಗಿತ್ತು. ಈ ಪರಂಪರೆಯ ಕಾರಣದಿಂದಾಗಿ ನನಗೂ ಸಹ ಸೇವಾದಳ ನಡೆಸುವ ಜವಾಬ್ದಾರಿ ಬಂದಿತ್ತು. ನಾನು ನಡೆಸುತ್ತಿದ್ದ ಸೇವಾದಳದ ಸ್ಥಳ ವಿಜಾಪುರದಲ್ಲಿ ಶಿವಾಜಿಯ ತಂದೆ ಸಾಂಬಾಜಿಯನ್ನು ಬಂಧಿಸಿಟ್ಟಿದ್ದ ಒಂದು ಪಾಳು ಬಿದ್ದ ಕೋಟೆಯಾಗಿತ್ತು. ಸೇವಾದಳದ ನನ್ನ ಈ ಹುಚ್ಚು ಮತ್ತು ಅದರ ಮೂಲಕ ನನಗೆ ದೊರೆತ ಹಲವಾರು ಅನುಭವಗಳು ಮತ್ತು ವಿಚಾರಗಳು ಸಹಜವಾಗಿಯೆ ಕೆಂಪಿಸಿದ್ಧನಹುಂಡಿಯಲ್ಲಿ ಗಾಂಧಿ ಸ್ಮಾರಕ ನಿಧಿಯ ಗ್ರಾಮಸೇವಕನಾಗಿ ಕೆಲಸ ಮಾಡುವ ಸಂದರ್ಭದಲ್ಲಿ ನೆರವಾಯಿತು. ಕೃಷ್ಣಯ್ಯನವರು ಕಟ್ಟಿಸಿದ್ದ ಹುಲ್ಲುಹೊದಿಕೆಯ ಸಾಮೂಹಿಕ "ಗಾಂಧಿ ಘರ್"ದ ಮುಂದಿದ್ದ ಬಯಲಿನಲ್ಲಿ ಸಂಜೆಯ ಹೊತ್ತು ಹುಂಡಿಯ ಮಕ್ಕಳಿಗಾಗಿ ಸೇವಾದಳ ಪ್ರಾರಂಭಿಸಿದೆ. ಆಗಿನ ಕಾಲದಲ್ಲಿ ಶಾಲೆಗಳಲ್ಲಿ ಈಗಿನಂತೆ ಡ್ರಿಲ್‌ಮಾಸ್ಟರ್‌ಗಳು ಇರುತ್ತಿರಲಿಲ್ಲ. ಆದ್ದರಿಂದ ಮಕ್ಕಳು ಆಟಗಳಿಂದ ವಂಚಿತರಾಗಿರುತ್ತಿದ್ದರು. ನಾನು ಹುಂಡಿಯಲ್ಲಿ ಸೇವಾದಳ ಪ್ರಾರಂಭಿಸಿದಾಗ ಹುಂಡಿಯ ಮಕ್ಕಳೆಲ್ಲರು ಆಕರ್ಷಿತರಾದರು ಮತ್ತು ದೊಡ್ಡ ಸಂಖ್ಯೆಯಲ್ಲಿ ಬಂದು ಸೇರುತ್ತಿದ್ದರು. ನಾನು ಅವರಿಗೆ ನನಗೆ ಗೊತ್ತಿದ್ದ ಸಾಮೂಹಿಕ ತತ್ವವಿರುವ ಆಟಗಳನ್ನು ಆಡಿಸುತ್ತಿದ್ದೆ. ಮಕ್ಕಳೆಲ್ಲರು ಸಂತೋಷಪಡುತ್ತಿದ್ದರು. ಊರಿನ ಮಕ್ಕಳನ್ನು ಹಾಗೆ ಆಡಿಸುತ್ತಿದ್ದಾಗ ಹಳ್ಳಿಯ ಕೆಲ ಜನರು ಬಂದು ನಿಂತು ಕುತೂಹಲದಿಂದ ನೋಡುತ್ತಿದ್ದರು. ಅವರಿಗೆ ಇದೆಲ್ಲವೂ ಒಂದು ಹೊಸ ಸಂಗತಿಯಾಗಿತ್ತು. ಸಂಜೆಯಾದ ಮೇಲೆ ಎಲ್ಲ ಮಕ್ಕಳನ್ನೂ ಸಾಲಾಗಿ ನಿಲ್ಲಿಸಿ ರಾಷ್ಟ್ರಗೀತೆಯೊಂದಿಗೆ ಸೇವಾದಳದ ಆ ದಿನದ ಕಾರ್ಯಕ್ರಮವನ್ನು ಮುಗಿಸುತ್ತಿದ್ದೆ. ಸೇವಾದಳದ ಮೂಲಕ ಹುಂಡಿಯ ಮಕ್ಕಳು ಮತ್ತು ದೊಡ್ಡವರ ಪರಿಚಯವಾದ್ದರಿಂದ ಗಾಂಧೀ ಸ್ಮಾರಕ ನಿಧಿಯವರು ಸೂಚಿಸಿದ್ದ ಕೆಲ ಕಾರ್ಯಕ್ರಮಗಳನ್ನು ಜಾರಿಗೆ ತರಲು ಸಹಾಯಕವಾಯಿತು. ನಾನು "ಗಾಂಧಿ ಘರ್" ಹೊರಗೆ ಸೇವಾದಳ ನಡೆಸುತ್ತಿದ್ದರೆ ಅದೇ ಮನೆಯಲ್ಲಿ ಒಳಗೆ ಗಿರಿಜಾರವರು ಚಿಕ್ಕ ಮಕ್ಕಳಿಗಾಗಿ ಶಿಶುವಿಹಾರದ ಕಾರ್ಯಕ್ರಮ ನಡೆಸುತ್ತಿದ್ದರು. ನಮ್ಮಿಬ್ಬರಿಗೂ ಪ್ರತಿ ತಿಂಗಳು ನಿಧಿಯವರು ನಮ್ಮ ಸಂಬಳವೆಂದು ೧೫೦ ರೂಗಳನ್ನು ಚೆಕ್ ಮೂಲಕ ಕಳುಹಿಸುತ್ತಿದ್ದರು. ನಾನು ಅದನ್ನು ನಂಜನಗೂಡಿನ ಎಸ್.ಬಿ.ಎಂ. ಶಾಖೆಯಲ್ಲಿ ನಗದುಗೊಳಿಸಿಕೊಳ್ಳುತ್ತಿದ್ದೆ. ಪ್ರತಿ ತಿಂಗಳು ಸಂಬಳ ಪಡೆಯಬೇಕಾದರೆ ಆ ತಿಂಗಳ ಕಾರ್ಯವರದಿಯನ್ನು ತಪ್ಪದೆ ಬೆಂಗಳೂರಿನಲ್ಲಿದ್ದ ನಿಧಿಯ ಕೇಂದ್ರ ಕಛೇರಿಗೆ ಕಳುಹಿಸಬೇಕಾಗುತ್ತಿತ್ತು. ಅನೇಕ ವೇಳೆ ನಿಧಿಯವರು ಸೂಚಿಸಿದ್ದ ಕಾರ್ಯಕ್ರಮಗಳನ್ನು ನಡೆಸಲು ಸಾಧ್ಯವಾಗದೆ ಕಾರ್ಯವರದಿಯನ್ನು ಕಳುಹಿಸಲು ತಡವಾಗುತ್ತಿತ್ತು. ಅದರ ಪರಿಣಾಮ ನಮಗೆ ತಡವಾದ ವೇತನ. ಆಗ ನಾನು ನಂಜನಗೂಡಿನಲ್ಲಿದ್ದ ಒಂದು ಅಂಗಡಿಯಿಂದ ಅಡುಗೆಯ ಪದಾರ್ಥಗಳನ್ನು ಸಾಲವಾಗಿ ತರುತ್ತಿದ್ದೆ. ನಾನು ನಿಧಿಯ ಕಾರ್ಯಕರ್ತನೆಂದು ಅಂಗಡಿಯವರಿಗೆ ಗೊತ್ತಿದ್ದುದರಿಂದ ನಂಬಿಕೆಯ ಆಧಾರದ ಮೇಲೆ ಪದಾರ್ಥಗಳನ್ನು ಸಾಲವಾಗಿ ಕೊಡುತ್ತಿದ್ದರು. ಹೀಗೆ ಎರಡು ವರ್ಷ ಕಾಲ ಕಳೆಯಿತು. ಕ್ರಮೇಣ ನನಗೆ ನಿಧಿಯ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗಲು ಕಷ್ಟವೆನಿಸಹತ್ತಿತು. ಹೀಗಾಗಿ ನಾನೊಂದು ದಿನ ನಿಧಿಗೆ ನನ್ನ ಮತ್ತು ಗಿರಿಜಾರವರ ರಾಜಿನಾಮೆ ಪತ್ರವನ್ನು ಕಳುಹಿಸಿಕೊಟ್ಟೆ. ಈ ಸಮಯದಲ್ಲಿಯೇ ನಮಗೆ ಮಗುವಾಗುವ ಸಮಯವು ಸಹ ಒದಗಿ ಬಂದಿತ್ತು.

(ಮುಂದುವರಿಯುವುದು . . . .)

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೆ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಹ ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ನಿಮ್ಮನ್ನು ಜನಪದ ವಿಚಾರದ ಲೇಖಕರ ಬಳಗಕ್ಕೆ ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

ತೆರೆದ-ಅಂಚೆ

KA-SKMND-470-2003-05
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA **-** Kannada Monthly Digest Edited Printed and Published by Surendra Koulagi at Janapada Seva Trust Printing Press, Melkote or behalf of Janapada Seva Trust, ®. Melkote. Dist- mandya – 571431
Phone : 08236 – 298754 e-mail : janapada@yahoo.com